# ಪಾರ್ಸಿ ವಿವಾಹ ಮತ್ತು ವಿವಾಹ ವಿಚ್ಛೇದನ ಅಧಿನಿಯಮ, 1936

16.11.2006ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 35ನೇ ಸಂಪುಟದ 1ನೇ ಸಂಚಿಕೆಯಲ್ಲಿ 127 ರಿಂದ 142ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**


### I - ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### II – ಪಾರ್ಸಿಗಳ ವಿವಾಹ

3. ಪಾರ್ಸಿ ವಿವಾಹಗಳ ಊರ್ಜಿತತೆಯ ಅಗತ್ಯತೆಗಳು
4. ಪುನರ್ ವಿವಾಹವು ಯಾವಾಗ ಕಾನೂನುಬಾಹಿರವಾಗುವುದು
5. ದ್ವಿವಿವಾಹಕ್ಕಾಗಿ ಶಿಕ್ಷೆ
6. ವಿವಾಹದ ಪ್ರಮಾಣಪತ್ರ ಮತ್ತು ನೋಂದಣಿ
7. ನೋಂದಣಿ ಅಧಿಕಾರಿಯ ನೇಮಕಾತಿ
8. ವಿವಾಹ ನೋಂದಣಿ ಪುಸ್ತಕವನ್ನು ಸಾರ್ವಜನಿಕರು ಪರಿಶೀಲಿಸಲು ಅವಕಾಶವಿರುವುದು
9. ಪ್ರಮಾಣ ಪತ್ರದ ಪ್ರತಿಯನ್ನು ಜನನ, ಮರಣ ಮತ್ತು ವಿವಾಹಗಳ ಮಹಾನೋಂದಣಿ ಅಧಿಕಾರಿಗೆ ಕಳುಹಿಸುವುದು
10. ವಿವಾಹ ವಿಚ್ಛೇದನಗಳ ನೋಂದಣಿ
11. 4ನೇ ಪ್ರಕರಣಕ್ಕೆ ತದ್ವಿರುದ್ಧವಾಗಿ ವಿವಾಹವನ್ನು ನೆರವೇರಿಸಿದ್ದಕ್ಕೆ ದಂಡ
12. ಪುರೋಹಿತನು 6ನೇ ಪ್ರಕರಣದ ಅಗತ್ಯತೆಗಳನ್ನು ನಿರ್ಲಕ್ಷಿಸಿದ್ದಕ್ಕಾಗಿ ದಂಡ
13. ಪ್ರಮಾಣ ಪತ್ರಕ್ಕೆ ರುಜು ಮಾಡಲು ಮತ್ತು ದೃಢೀಕರಿಸುವುದನ್ನು ಬಿಟ್ಟಿದ್ದಕ್ಕಾಗಿ ದಂಡ
14. ಸುಳ್ಳು ಪ್ರಮಾಣ ಪತ್ರ ಇತ್ಯಾದಿಗಳನ್ನು ಸೃಷ್ಟಿಸಿದ್ದಕ್ಕಾಗಿ ದಂಡ
15. ಪ್ರಮಾಣ ಪತ್ರವನ್ನು ನೋಂದಾಯಿಸಲು ತಪ್ಪಿದ್ದಕ್ಕಾಗಿ ದಂಡ
16. ರಿಜಿಸ್ಟರನ್ನು ರಹಸ್ಯವಾಗಿಟ್ಟಿದ್ದಕ್ಕೆ, ನಾಶಗೊಳಿಸಿದ್ದಕ್ಕೆ ಅಥವಾ ವ್ಯತ್ಯಾಸಗೊಳಿಸಿದ್ದಕ್ಕಾಗಿ ದಂಡ
17. ಔಪಚಾರಿಕ ಕ್ರಮ ದೋಷಗಳಿಂದ ವಿವಾಹವು ಅಸಿಂಧುವಾಗದಿರುವುದು

### III – ಪಾರ್ಸಿ ವೈವಾಹಿಕ ನ್ಯಾಯಾಲಯಗಳು

18. ಅಧಿನಿಯಮದ ಮೇರೆಗೆ ವಿಶೇಷ ನ್ಯಾಯಾಲಯಗಳ ರಚನೆ
19. ಪಾರ್ಸಿ ಮುಖ್ಯ ವೈವಾಹಿಕ ನ್ಯಾಯಾಲಯಗಳು
20. ಪಾರ್ಸಿ ಜಿಲ್ಲಾ ವೈವಾಹಿಕ ನ್ಯಾಯಾಲಯಗಳು
21. ಜಿಲ್ಲಾ ನ್ಯಾಯಾಲಯಗಳ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಬದಲಿಸುವ ಅಧಿಕಾರ
22. ಮುಖ್ಯ ವೈವಾಹಿಕ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಕೆಲವು ಜಿಲ್ಲೆಗಳ ಸೇರ್ಪಡೆ

23. ನ್ಯಾಯಾಲಯದ ಮೊಹರುಗಳು
24. ಪ್ರತಿನಿಧಿಗಳ ನೇಮಕಾತಿ
25. ಹೊಸ ಪ್ರತಿನಿಧಿಗಳನ್ನು ನೇಮಕ ಮಾಡುವ ಅಧಿಕಾರ
26. ಪ್ರತಿನಿಧಿಗಳನ್ನು ಲೋಕನೌಕರರೆಂದು ಭಾವಿಸುವುದು
27. 19 ಮತ್ತು 20ನೇ ಪ್ರಕರಣಗಳ ಮೇರೆಗೆ ಪ್ರತಿನಿಧಿಗಳ ಆಯ್ಕೆಯು 24ನೇ ಪ್ರಕರಣದ ಮೇರೆಗೆ ನೇಮಕಗೊಂಡವರಂತಿರಬೇಕು
28. ವೈವಾಹಿಕ ನ್ಯಾಯಾಲಯಗಳಲ್ಲಿ ನ್ಯಾಯವಾದಿಗಳು
29. ದಾವೆಗಳನ್ನು ಯಾವ ನ್ಯಾಯಾಲಯಗಳಲ್ಲಿ ಹೂಡುವುದು

## IV- ವೈವಾಹಿಕ ದಾವೆಗಳು

30. ಅನೂರ್ಜಿತಗೊಳಿಸುವುದಕ್ಕಾಗಿ ದಾವೆ
31. ವಿಘಟನೆಗಾಗಿ ದಾವೆಗಳು
32. ವಿವಾಹ ವಿಚ್ಛೇದನದ ಕಾರಣಗಳು

32ಎ. ಡಿಕ್ರಿಗೆ ಅನುಸಾರವಾಗಿ ಒಂದು ವರ್ಷದ ಒಳಗೇ ಒಟ್ಟಿಗೆ ಬಾಳುವೆ ಮಾಡುವುದನ್ನು ಪುನರಾರಂಭಿಸದಿರುವುದು ಅಥವಾ ದಾಂಪತ್ಯ ಅಧಿಕಾರಗಳ ಪುನಃ ಸ್ಥಾಪನೆಯಾಗದಿರುವುದು ವಿವಾಹ ವಿಚ್ಛೇದನಕ್ಕೆ ಆಧಾರವಾಗಿರಬೇಕು

32ಬಿ. ಪರಸ್ಪರ ಸಮ್ಮತಿಯಿಂದ ವಿವಾಹ ವಿಚ್ಛೇದನ

33. ಸಹ-ಪ್ರತಿವಾದಿಯನ್ನು ಸೇರಿಸಿಕೊಳ್ಳುವುದು
34. ನ್ಯಾಯಿಕ ಪ್ರತ್ಯೇಕೀಕರಣಕ್ಕಾಗಿ ದಾವೆಗಳು
35. ಕೆಲವು ದಾವೆಗಳಲ್ಲಿ ಡಿಕ್ರಿಗಳು
36. ದಾಂಪತ್ಯ ಅಧಿಕಾರಗಳ ಪುನಃ ಸ್ಥಾಪನೆಗೆ ದಾವೆ
37. ಯಾವುದೇ ಪರಿಹಾರಕ್ಕಾಗಿ ಪ್ರತಿವಾದಿಯ ಪ್ರತಿ ಕ್ಲೇಮು
38. ದಸ್ತಾವೇಜೀಯ ಸಾಕ್ಷ್ಯ
39. ವ್ಯಾಜ್ಯಕಾಲೀನ ನಿರ್ವಹಣಾ ವೆಚ್ಚ
40. ಶಾಶ್ವತ ನಿರ್ವಹಣಾ ವೆಚ್ಚ ಮತ್ತು ಜೀವನಾಂಶ
41. ಹೆಂಡತಿಗೆ ಅಥವಾ ಅವಳ ನ್ಯಾಸಧಾರಿಗೆ ನಿರ್ವಹಣಾ ವೆಚ್ಚವನ್ನು ಸಂದಾಯ ಮಾಡುವುದು
42. ಜಂಟಿ ಸ್ವತ್ತಿನ ವಿಲೆ
43. ದಾವೆಗಳನ್ನು ರಹಸ್ಯವಾಗಿ ವಿಚಾರಣೆ ಮಾಡುವುದು ಮತ್ತು ಮುದ್ರಿಸದಿರುವುದು ಅಥವಾ ಪ್ರಕಟಿಸದಿರುವುದು
44. ಅಧಿವಿಚಾರಣೆಯ ಮಾನ್ಯತೆ
45. ಈ ಅಧಿನಿಯಮದ ಮೇರೆಗಿನ ದಾವೆಗಳಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಉಪಬಂಧಗಳ ಅನ್ವಯ
46. ಕಾನೂನು, ಪ್ರಕ್ರಿಯೆ ಮತ್ತು ಸಂಗತಿಯ ಪ್ರಶ್ನೆಗಳ ನಿರ್ಧರಣೆ
47. ಉಚ್ಚ ನ್ಯಾಯಾಲಯಕ್ಕೆ ಅಪೀಲು

48. ಪುನಃ ವಿವಾಹವಾಗಲು ಪಕ್ಷಕಾರರಿಗೆ ಸ್ವಾತಂತ್ರ್ಯ

**V- ಪಕ್ಷಕಾರರ ಮಕ್ಕಳು**

49. ಮಕ್ಕಳ ಅಭಿರಕ್ಷೆ

50. ಮಕ್ಕಳ ಪ್ರಯೋಜನಕ್ಕಾಗಿ ಹೆಂಡತಿಯ ಸ್ವತ್ತಿನ ಇತ್ಯರ್ಥ

**VI – ಸಂಕೀರ್ಣ**

51. ಉಚ್ಚ ನ್ಯಾಯಾಲಯದ ಅಧೀಕ್ಷಣೆ

52. ಅಧಿನಿಯಮದ ಉಪಬಂಧಗಳ ಅನ್ವಯ

53. ನಿರಸನ

ಅನುಸೂಚಿ I

ಅನುಸೂಚಿ II

# ಪಾರ್ಸಿ ವಿವಾಹ ಮತ್ತು ವಿವಾಹ ವಿಚ್ಛೇದನ ಅಧಿನಿಯಮ, 1936

(1936ರ ಅಧಿನಿಯಮ ಸಂಖ್ಯೆ 3)

[23ನೇ ಏಪ್ರಿಲ್, 1936]

ಪಾರ್ಸಿಗಳ ವಿವಾಹ ಮತ್ತು ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ಕಾನೂನನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಪಾರ್ಸಿಗಳ ವಿವಾಹ ಮತ್ತು ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ಕಾನೂನನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ, ಅದನ್ನು ಈ ಮೂಲಕ ಮುಂದಿನಂತೆ ಅಧಿನಿಯಮಿಸಲಾಗಿದೆ:-

## I - ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಪಾರ್ಸಿ ವಿವಾಹ ಮತ್ತು ವಿವಾಹ ವಿಚ್ಛೇದನ ಅಧಿನಿಯಮ, 1936 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ:

ಪರಂತು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, 1ನೇ ನವೆಂಬರ್ 1956ಕ್ಕೆ ನಿಕಟಪೂರ್ವದಲ್ಲಿ 'ಬಿ' ಭಾಗದ ರಾಜ್ಯಗಳಲ್ಲಿ ಒಳಗೊಂಡಿದ್ದ ರಾಜ್ಯ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ, ಪಾರ್ಸಿ ವೈವಾಹಿಕ ನ್ಯಾಯಾಲಯಗಳ ರಚನೆಗೆ ಮತ್ತು ಅಧಿಕಾರಗಳಿಗೆ ಮತ್ತು ಅಂಥ ನ್ಯಾಯಾಲಯಗಳ ತೀರ್ಮಾನಗಳ ಮತ್ತು ಆದೇಶಗಳ ಮೇಲೆ ಸಲ್ಲಿಸಲಾಗುವ ಅಪೀಲುಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಮಾರ್ಪಾಟುಗಳೊಂದಿಗೆ ಅನ್ವಯವಾಗತಕ್ಕದೆಂದು ನಿರ್ದೇಶಿಸಬಹುದು.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು* ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,-

(1) "ಮುಖ್ಯ ನ್ಯಾಯಮೂರ್ತಿ" ಎಂಬ ಪದವು ಹಿರಿಯ ನ್ಯಾಯಾಧೀಶನನ್ನು ಒಳಗೊಳ್ಳುತ್ತದೆ;

(2) "ನ್ಯಾಯಾಲಯ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನ್ಯಾಯಾಲಯ;

(3) ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಯೊಂದಿಗೆ "ಪರಿತ್ಯಜಿಸು" ಎಂದರೆ ವಿವಾಹದ ಒಬ್ಬ ಪಕ್ಷಕಾರನು ಯುಕ್ತ ಕಾರಣವಿಲ್ಲದೆ ಮತ್ತು ಇನ್ನೊಬ್ಬ ಪಕ್ಷಕಾರನ ಸಮ್ಮತಿ ಇಲ್ಲದೆ ಅಥವಾ ಅಂಥ ಪಕ್ಷಕಾರನ ಇಚ್ಛೆಗೆ ವಿರುದ್ಧವಾಗಿ ಪರಿತ್ಯಜಿಸುವುದು;

(4) "ತೀವ್ರ ಸ್ವರೂಪದ ಗಾಯ" ಎಂದರೆ,-

(ಎ) ಪುಂಸತ್ವಹರಣ;

(ಬಿ) ಯಾವುದಾದರೂ ಒಂದು ಕಣ್ಣಿನ ದೃಷ್ಟಿಯನ್ನು ಶಾಶ್ವತವಾಗಿ ಕಳೆದುಕೊಳ್ಳುವುದು;

(ಸಿ) ಯಾವುದಾದರೂ ಒಂದು ಕಿವಿಯ ಶ್ರವಣ ಶಕ್ತಿಯನ್ನು ಶಾಶ್ವತವಾಗಿ ಕಳೆದುಕೊಳ್ಳುವುದು;

* 1936ರ ಜೂನ್ 22 ರಂದು ಜಾರಿಗೆ ಬಂದಿದೆ. ಗೆಜೆಟ್ ಆಫ್ ಇಂಡಿಯಾ 1936, ಭಾಗ 1, ಪುಟ 621.

(ಡಿ) ದೇಹದ ಯಾವುದೇ ಅವಯವ ಅಥವಾ ಕೀಲನ್ನು ಕಳೆದುಕೊಳ್ಳುವುದು;

(ಇ) ದೇಹದ ಯಾವುದೇ ಅವಯವದ ಅಥವಾ ಕೀಲಿನ ನಾಶ ಅಥವಾ ಶಕ್ತಿಯ ಶಾಶ್ವತ ಹಾನಿ;

(ಎಫ್) ತಲೆ ಅಥವಾ ಮುಖವು ಖಾಯಂ ಆಗಿ ವಿರೂಪಗೊಳ್ಳುವುದು; ಅಥವಾ

(ಜಿ) ಜೀವಕ್ಕೆ ಅಪಾಯವುಂಟು ಮಾಡುವಂಥ ಯಾವುದೇ ನೋವು;

(5) "ಗಂಡ" ಎಂದರೆ ಒಬ್ಬ ಪಾರ್ಸಿ ಗಂಡ;

(6) "ವಿವಾಹ" ಎಂದರೆ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲಾಗಲಿ ಅಥವಾ ನಂತರವಾಗಲಿ ಪಾರ್ಸಿಗಳ ನಡುವೆ ಮಾಡಿಕೊಳ್ಳುವ ವಿವಾಹ;

(7) "ಪಾರ್ಸಿ" ಎಂದರೆ ಸೊರೊಷ್ಟ್ರಿಯನ್ ಪಂಥಕ್ಕೆ ಸೇರಿದ ಪಾರ್ಸಿ;

(8) "ಪುರೋಹಿತ" ಎಂದರೆ ಪಾರ್ಸಿ ಪುರೋಹಿತ; ಮತ್ತು ಅದರಲ್ಲಿ ದಸ್ತೂರ್ ಮತ್ತು ಮೊಬೆಡ್ ಸೇರುತ್ತಾರೆ;

(9) "ಹೆಂಡತಿ" ಎಂದರೆ ಒಬ್ಬ ಪಾರ್ಸಿ ಹೆಂಡತಿ.

## II - ಪಾರ್ಸಿಗಳ ವಿವಾಹ

**3. ಪಾರ್ಸಿ ವಿವಾಹಗಳ ಊರ್ಜಿತತೆಯ ಅಗತ್ಯತೆಗಳು.**- (1) ಯಾವುದೇ ವಿವಾಹವು,-

(ಎ) ವಿವಾಹ ಮಾಡಿಕೊಳ್ಳುವ ಪಕ್ಷಕಾರರು 1ನೇ ಅನುಸೂಚಿಯಲ್ಲಿ ವಿವರಿಸಿರುವಂತೆ, ರಕ್ತ ಸಂಬಂಧದ ಅಥವಾ ನೆಂಟಸ್ತಿಕೆಯ ತಲೆಮಾರುಗಳಲ್ಲಿ ಯಾವುದೇ ತಲೆಮಾರಿನ ಪರಸ್ಪರ ಸಂಬಂಧಿಗಳಾಗಿದ್ದರೆ; ಅಥವಾ

(ಬಿ) ಅಂಥ ವಿವಾಹವು, ಪುರೋಹಿತನಿಂದ ಮತ್ತು ಪುರೋಹಿತನನ್ನು ಬಿಟ್ಟು ಇಬ್ಬರು ಪಾರ್ಸಿ ಸಾಕ್ಷಿದಾರರ ಸಮ್ಮುಖದಲ್ಲಿ "ಆಶೀರ್ವಾದ" ಎಂದು ಕರೆಯಲಾಗುವ ಪಾರ್ಸಿ ಸಂಪ್ರದಾಯಾನುಸಾರ ವಿಧಿವತ್ತಾಗಿ ನೆರವೇರಿರದಿದ್ದರೆ; ಅಥವಾ

(ಸಿ) ಪುರುಷನಾದರೆ ಇಪ್ಪತ್ತೊಂದು ವರ್ಷ ವಯಸ್ಸು ಪೂರ್ಣವಾಗಿಲ್ಲದಿರುವ ಮತ್ತು ಸ್ತ್ರೀಯಾದರೆ ಹದಿನೆಂಟು ವರ್ಷ ವಯಸ್ಸು ಪೂರ್ಣವಾಗಿಲ್ಲದಿರುವ ಯಾರೇ ಪಾರ್ಸಿಯ ಸಂದರ್ಭದಲ್ಲಿ (ಅಂಥ ಪಾರ್ಸಿಯು, ಅವನ ಅಥವಾ ಅವಳ ಧರ್ಮವನ್ನು ಅಥವಾ ಅಧಿವಾಸವನ್ನು ಬದಲಾಯಿಸಿರಲಿ ಅಥವಾ ಬದಲಾಯಿಸದಿರಲಿ)

- ಊರ್ಜಿತವಾಗತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಯಾವುದೇ ಉಪಬಂಧಗಳ ಮೇರೆಗೆ ವಿವಾಹವು ಅನೂರ್ಜಿತವಾಗುವುದಾದರೂ, ಅಂಥ ವಿವಾಹದಿಂದ ಹುಟ್ಟಿದ ಯಾವುದೇ ಮಗುವು, ಆ ಮದುವೆಯು ಊರ್ಜಿತವಾಗಿದ್ದಿದ್ದರೆ ಹೇಗೆ ಔರಸ ಮಗುವಾಗುತ್ತಿತ್ತೋ ಹಾಗೆ ಔರಸ ಮಗುವಾಗಿರತಕ್ಕದ್ದು.

**4. ಪುನರ್ ವಿವಾಹವು ಯಾವಾಗ ಕಾನೂನು ಬಾಹಿರವಾಗುವುದು.**- (1) ಯಾರೇ ಪಾರ್ಸಿಯು (ಅಂಥ ಪಾರ್ಸಿಯು ಅವನ ಅಥವಾ ಅವಳ ಧರ್ಮವನ್ನು ಅಥವಾ ಅಧಿವಾಸವನ್ನು ಬದಲಾಯಿಸಿರಲಿ ಅಥವಾ ಬದಲಾಯಿಸದಿರಲಿ) ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಅವನ ಅಥವಾ ಅವಳ, ಗಂಡನ ಇಲ್ಲವೆ ಹೆಂಡತಿಯ ಜೀವಿತಾವಧಿಯಲ್ಲಿ ಪಾರ್ಸಿಯಾಗಿರಲಿ ಅಥವಾ ಇಲ್ಲದಿರಲಿ, ಅಂಥ ಹೆಂಡತಿಯಿಂದ ಅಥವಾ ಗಂಡನಿಂದ ಕಾನೂನುಬದ್ಧ ವಿಚ್ಛೇದನವನ್ನು ಅವನಾಗಲಿ, ಅವಳಾಗಲಿ ಪಡೆದ ಹೊರತು, ಅಥವಾ ಅಂಥ ಹೆಂಡತಿಯೊಂದಿಗೆ ಅಥವಾ ಗಂಡನೊಂದಿಗೆ ಅವನ ಅಥವಾ ಅವಳ ವಿವಾಹವು ಕಾನೂನುಬದ್ಧವಾಗಿ ಅನೂರ್ಜಿತವಾಗಿದೆಯೆಂದು ಅಥವಾ ವಿಘಟಿತವಾಗಿದೆಯೆಂದು ಘೋಷಿಸಿದ್ದ ಹೊರತು, ಮತ್ತು ಪಾರ್ಸಿ ವಿವಾಹ ಮತ್ತು ವಿವಾಹ ವಿಚ್ಛೇದನ ಅಧಿನಿಯಮ, 1865ರ ಮೇರೆಗೆ ಮತ್ತು ಈ ಅಧಿನಿಯಮದ ಮೇರೆಗೆ ವಿವಾಹವನ್ನು ಮಾಡಿಕೊಂಡಿದ್ದರೆ, ಮೇಲೆ ಹೇಳಿರುವ

ಅಧಿನಿಯಮಗಳಲ್ಲಿ ಯಾವುದೇ ಒಂದು ಅಧಿನಿಯಮದ ಮೇರೆಗೆ ವಿವಾಹ ವಿಚ್ಛೇದನ, ಘೋಷಣೆ ಅಥವಾ ವಿಘಟನೆ ಆಗಿದ್ದ ಹೊರತು ಯಾವುದೇ ವಿವಾಹ ಆಗತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿ ಮಾಡಿಕೊಂಡ ಪ್ರತಿಯೊಂದು ವಿವಾಹವು ಅಸಿಂಧುವಾಗತಕ್ಕದ್ದು.

**5. ದ್ವಿವಿವಾಹಕ್ಕಾಗಿ ಶಿಕ್ಷೆ.**- ಪ್ರತಿಯೊಬ್ಬ ಪಾರ್ಸಿಯು, ಅವನ ಅಥವಾ ಅವಳ ಹೆಂಡತಿಯು ಅಥವಾ ಗಂಡನು, ಪಾರ್ಸಿಯಾಗಿರಲಿ ಅಥವಾ ಆಗಿಲ್ಲದಿರಲಿ, ತಮ್ಮ ಜೀವಿತಾವಧಿಯಲ್ಲಿ ಅಂಥ ಹೆಂಡತಿ ಅಥವಾ ಗಂಡನಿಂದ ಕಾನೂನುಬದ್ಧವಾಗಿ ವಿವಾಹವಿಚ್ಛೇದನ ಪಡೆಯದೆ, ಅಥವಾ ಅವನ ಅಥವಾ ಅವಳ ವಿವಾಹವು ಅಂಥ ಹೆಂಡತಿ ಅಥವಾ ಗಂಡನ ವಿವಾಹವು ಅನೂರ್ಜಿತ ಅಥವಾ ವಿಘಟಿತವಾಗಿದೆಯೆಂದು ಕಾನೂನುಬದ್ಧವಾಗಿ ಘೋಷಿತವಾಗದೆ, ವಿವಾಹವಾಗಿದ್ದರೆ ಗಂಡ ಅಥವಾ ಹೆಂಡತಿಯ ಜೀವಿತಾವಧಿಯಲ್ಲಿ ಪುನಃ ವಿವಾಹವಾದ ಅಪರಾಧಕ್ಕಾಗಿ ಭಾರತ ದಂಡ ಸಂಹಿತೆಯ 494 ಮತ್ತು 495ನೇ ಪ್ರಕರಣಗಳಲ್ಲಿ ಉಪಬಂಧಿಸಿರುವ ದಂಡನೆಗಳಿಗೆ ಗುರಿಯಾಗತಕ್ಕದ್ದು.

**6. ವಿವಾಹದ ಪ್ರಮಾಣಪತ್ರ ಮತ್ತು ನೋಂದಣಿ.**- ಈ ಅಧಿನಿಯಮದ ಮೇರೆಗೆ ಮಾಡಿಕೊಂಡ ಪ್ರತಿಯೊಂದು ವಿವಾಹವನ್ನು, IIನೇ ಅನುಸೂಚಿಯಲ್ಲಿ ಒಳಗೊಂಡಿರುವ ನಮೂನೆಯಲ್ಲಿ ವಿವಾಹ ಕಾರ್ಯವನ್ನು ನಡೆಸುವ ಪುರೋಹಿತನು ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿದ ಕೂಡಲೇ ಅದನ್ನು ಪ್ರಮಾಣೀಕರಿಸತಕ್ಕದ್ದು. ಪ್ರಮಾಣ ಪತ್ರಕ್ಕೆ ಸದರಿ ಪುರೋಹಿತ, ವಿವಾಹ ಮಾಡಿಕೊಳ್ಳುವ ಪಕ್ಷಕಾರರು, ಮತ್ತು ವಿವಾಹದಲ್ಲಿ ಹಾಜರಿದ್ದ ಇಬ್ಬರು ಸಾಕ್ಷಿದಾರರು ಸಹಿ ಮಾಡತಕ್ಕದ್ದು; ಮತ್ತು ಸದರಿ ಪುರೋಹಿತನು ಯಾವ ವಿವಾಹವು ವಿಧಿವತ್ತಾಗಿ ಎಲ್ಲಿ ನೆರವೇರಿತ್ತೋ ಆ ಸ್ಥಳದ ನೋಂದಣಿ ಅಧಿಕಾರಿಗೆ ಗಂಡನು ಸಂದಾಯ ಮಾಡಿದ ಎರಡು ರೂಪಾಯಿ ಶುಲ್ಕದೊಂದಿಗೆ ಆ ಪ್ರಮಾಣ ಪತ್ರವನ್ನು ಕಳುಹಿಸತಕ್ಕದ್ದು. ನೋಂದಣಿ ಅಧಿಕಾರಿಯು ಅಂಥ ಪ್ರಮಾಣಪತ್ರ ಮತ್ತು ಶುಲ್ಕವನ್ನು ಸ್ವೀಕರಿಸಿದ ಮೇಲೆ ಆ ಉದ್ದೇಶಕ್ಕಾಗಿ ಅವನು ಇಟ್ಟಿರುವ ರಿಜಿಸ್ಟರಿನಲ್ಲಿ ಪ್ರಮಾಣ ಪತ್ರವನ್ನು ದಾಖಲು ಮಾಡಿಕೊಳ್ಳತಕ್ಕದ್ದು ಮತ್ತು ಶುಲ್ಕವನ್ನು ಇಟ್ಟುಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು.

**7. ನೋಂದಣಿ ಅಧಿಕಾರಿಯ ನೇಮಕಾತಿ.**- ಈ ಅಧಿನಿಯಮದ ಉದ್ದೇಶಕ್ಕಾಗಿ, ಒಂದು ಉಚ್ಚ ನ್ಯಾಯಾಲಯದ ಸಾಮಾನ್ಯ ಮೂಲ ಸಿವಿಲ್ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಒಬ್ಬ ನೋಂದಣಿ ಅಧಿಕಾರಿಯನ್ನು ಅಂಥ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನು ನೇಮಕ ಮಾಡತಕ್ಕದ್ದು ಮತ್ತು ಅಂಥ ಪರಿಮಿತಿಗಳ ಆಚೆಗಿನ ಪ್ರದೇಶಗಳಲ್ಲಿ ರಾಜ್ಯ ಸರ್ಕಾರವೇ ನೇಮಕ ಮಾಡತಕ್ಕದ್ದು. ಹಾಗೆ ನೇಮಕಗೊಂಡ ಪ್ರತಿಯೊಬ್ಬ ನೋಂದಣಿ ಅಧಿಕಾರಿಯನ್ನು ಮುಖ್ಯ ನ್ಯಾಯಾಧೀಶನು ಅಥವಾ ಅವನನ್ನು ನೇಮಕ ಮಾಡಿದ ರಾಜ್ಯ ಸರ್ಕಾರವು ತೆಗೆದುಹಾಕಬಹುದು.

**8. ವಿವಾಹ ನೋಂದಣಿ ಪುಸ್ತಕವನ್ನು ಸಾರ್ವಜನಿಕರು ಪರಿಶೀಲಿಸಲು ಅವಕಾಶವಿರುವುದು.**- 6ನೇ ಪ್ರಕರಣದಲ್ಲಿ ನಮೂದಿಸಿರುವ ವಿವಾಹಗಳ ನೋಂದಣಿ ಪುಸ್ತಕವು ಎಲ್ಲ ಯುಕ್ತ ಕಾಲಗಳಲ್ಲಿ ಪರಿಶೀಲನೆಗೆ ಮುಕ್ತವಾಗಿರತಕ್ಕುದು ಮತ್ತು ಅದರ ಪ್ರಮಾಣಿತ ಉದ್ಧೃತ ಭಾಗಕ್ಕೆ ಅರ್ಜಿ ಸಲ್ಲಿಸಿ ಕೋರಿದಾಗ ಅಂಥ ಪ್ರತಿಯೊಂದು ಉದ್ಧೃತ ಭಾಗಕ್ಕೆ ಅರ್ಜಿದಾರನು ಎರಡು ರೂಪಾಯಿಗಳನ್ನು ಸಂದಾಯ ಮಾಡಿದ ಮೇಲೆ ನೋಂದಣಿ ಅಧಿಕಾರಿಯು ಅದನ್ನು ನೀಡತಕ್ಕದ್ದು. ಅಂಥ ಪ್ರತಿಯೊಂದು ನೋಂದಣಿ ಪುಸ್ತಕವು ಅದರಲ್ಲಿ ಒಳಗೊಂಡಿರುವ ಹೇಳಿಕೆಗಳ ನಿಜಾಂಶದ ಸಾಕ್ಷ್ಯವಾಗಿರತಕ್ಕದ್ದು.

**9. ಪ್ರಮಾಣ ಪತ್ರದ ಪ್ರತಿಯನ್ನು ಜನನ, ಮರಣ ಮತ್ತು ವಿವಾಹಗಳ ಮಹಾ ನೋಂದಣಿ ಅಧಿಕಾರಿಗೆ ಕಳುಹಿಸುವುದು.**- ಮುಂಬೈ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನು ನೇಮಕ ಮಾಡಿದ ನೋಂದಣಿ ಅಧಿಕಾರಿಯನ್ನು ಹೊರತುಪಡಿಸಿ, ಇತರ ಪ್ರತಿಯೊಬ್ಬ ನೋಂದಣಿ ಅಧಿಕಾರಿಯು, ಅವನನ್ನು ನೇಮಕ ಮಾಡಿದ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದೇಶಿಸುವ ಮಧ್ಯಂತರಗಳಲ್ಲಿ ಅಂಥ ರಾಜ್ಯ ಸರ್ಕಾರವು ಆಡಳಿತ ನಡೆಸುವ ರಾಜ್ಯ ಕ್ಷೇತ್ರಗಳ ಜನನ, ಮರಣ ಮತ್ತು ವಿವಾಹಗಳ ಮಹಾ ನೋಂದಣಿ ಅಧಿಕಾರಿಗೆ, ಅಂಥ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಯಮಿಸುವಂಥ ನಮೂನೆಯಲ್ಲಿ ಕಳೆದ ಅಂಥ ಮಧ್ಯಂತರಗಳವರೆಗೆ ವಿವಾಹಗಳ ರಿಜಿಸ್ಟರಿನಲ್ಲಿ ಅವನು ದಾಖಲು ಮಾಡಿರುವ ಎಲ್ಲ ಪ್ರಮಾಣ ಪತ್ರಗಳನ್ನು ಪ್ರಮಾಣೀಕರಿಸಿ ಅವುಗಳ ನಕಲು ಪ್ರತಿಗಳನ್ನು ಕಳುಹಿಸಿಕೊಡತಕ್ಕದ್ದು.

**10. ವಿವಾಹ ವಿಚ್ಛೇದನಗಳ ನೋಂದಣಿ.**- ಒಂದು ನ್ಯಾಯಾಲಯವು ವಿವಾಹ ವಿಚ್ಛೇದನ, ಅನೂರ್ಜಿತತೆ ಅಥವಾ ವಿಘಟನೆಗಾಗಿ ಡಿಕ್ರಿಯನ್ನು ಹೊರಡಿಸಿದಾಗ, ನ್ಯಾಯಾಲಯವು 7ನೇ ಪ್ರಕರಣದ ಮೇರೆಗೆ ನೇಮಕ ಮಾಡಿದ ತನ್ನ ಅಧಿಕಾರ ವ್ಯಾಪ್ತಿಯೊಳಗಿನ ವಿವಾಹಗಳ ನೋಂದಣಿ ಅಧಿಕಾರಿಗೆ ನೋಂದಣಿಗಾಗಿ ಡಿಕ್ರಿಯ ಒಂದು ನಕಲು ಪ್ರತಿಯನ್ನು ಕಳುಹಿಸಿಕೊಡತಕ್ಕದ್ದು. ನೋಂದಣಿ ಅಧಿಕಾರಿಯು ಆ ಉದ್ದೇಶಕ್ಕಾಗಿ ಇಟ್ಟಿರುವ ರಿಜಿಸ್ಟರಿನಲ್ಲಿ ಅದನ್ನು ನಮೂದು ಮಾಡತಕ್ಕದ್ದು, ಮತ್ತು ನೋಂದಣಿ ಅಧಿಕಾರಿಗಳಿಗೆ ಮತ್ತು ವಿವಾಹಗಳ ರಿಜಿಸ್ಟರುಗಳಿಗೆ ಅನ್ವಯವಾಗುವ IIನೇ ಭಾಗದ ಉಪಬಂಧಗಳು ವಿವಾಹ ವಿಚ್ಛೇದನ ಮತ್ತು ಶೂನ್ಯತೆ ಮತ್ತು ವಿಘಟನೆಯ ಡಿಕ್ರಿಗಳ ನೋಂದಣಿ ಅಧಿಕಾರಿಗೆ ಮತ್ತು ರಿಜಿಸ್ಟರುಗಳಿಗೆ ಸಾಧ್ಯವಿರುವಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

**11. 4ನೇ ಪ್ರಕರಣಕ್ಕೆ ತದ್ವಿರುದ್ಧವಾಗಿ ವಿವಾಹವನ್ನು ನೆರವೇರಿಸಿದ್ದಕ್ಕೆ ದಂಡ.**- ಯಾರೇ ಪುರೋಹಿತನು 4ನೇ ಪ್ರಕರಣಕ್ಕೆ ವಿರುದ್ಧವಾಗಿ ಮತ್ತು ಅದನ್ನು ಉಲ್ಲಂಘಿಸಿ ಯಾವುದೇ ವಿವಾಹವನ್ನು, ಗೊತ್ತಿದ್ದೂ ಮತ್ತು ಉದ್ದೇಶಪೂರ್ವಕವಾಗಿ ವಿಧಿವತ್ತಾಗಿ ನೆರವೇರಿಸಿದರೆ, ಆ ಕುರಿತು ಅಪರಾಧ ನಿರ್ಣಯವಾದ ನಂತರ ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸ ಶಿಕ್ಷೆಯಿಂದ, ಅಥವಾ ಎರಡು ನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**12. ಪುರೋಹಿತನು 6ನೇ ಪ್ರಕರಣದ ಅಗತ್ಯತೆಗಳನ್ನು ನಿರ್ಲಕ್ಷಿಸಿದ್ದಕ್ಕಾಗಿ ದಂಡ.**- ಯಾರೇ ಪುರೋಹಿತನು, 6ನೇ ಪ್ರಕರಣದಲ್ಲಿ ಒಳಗೊಂಡಿರುವ ತನಗೆ ಸಂಬಂಧಿಸಿದ ಯಾವುವೇ ಅಗತ್ಯತೆಗಳನ್ನು ಪಾಲಿಸುವಲ್ಲಿ ನಿರ್ಲಕ್ಷ್ಯ ತೋರಿದರೆ, ಆ ಕುರಿತು ಅಪರಾಧ ನಿರ್ಣಯವಾದ ನಂತರ ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಮೂರು ತಿಂಗಳವರೆಗೆ ವಿಸ್ತರಿಸಬಸಹುದಾದ ಸಾದಾ ಕಾರಾವಾಸ ಶಿಕ್ಷೆಯಿಂದ ಅಥವಾ ಒಂದು ನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**13. ಪ್ರಮಾಣ ಪತ್ರಕ್ಕೆ ರುಜು ಮಾಡಲು ಮತ್ತು ದೃಢೀಕರಿಸುವುದನ್ನು ಬಿಟ್ಟಿದ್ದಕ್ಕಾಗಿ ದಂಡ.**- 6ನೇ ಪ್ರಕರಣದ ಮೂಲಕ ಸದರಿ ಪ್ರಮಾಣ ಪತ್ರಕ್ಕೆ ರುಜು ಹಾಕಲು ಅಥವಾ ಅದನ್ನು ದೃಢೀಕರಿಸಲು ಅಗತ್ಯಪಡಿಸಲಾದ ಪ್ರತಿಯೊಬ್ಬ ಇತರ ವ್ಯಕ್ತಿಯು ಹಾಗೆ ಮಾಡಲು ಉದ್ದೇಶಪೂರ್ವಕವಾಗಿ ಬಿಟ್ಟರೆ ಅಥವಾ ಉಪೇಕ್ಷಿಸಿದರೆ ಆ ಕುರಿತು ಅಪರಾಧ ನಿರ್ಣಯವಾದ ನಂತರ ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಒಂದು ನೂರು ರೂಪಾಯಿಗೆ ಮೀರದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**14. ಸುಳ್ಳು ಪ್ರಮಾಣಪತ್ರ ಇತ್ಯಾದಿಗಳನ್ನು ಸೃಷ್ಟಿಸಿದ್ದಕ್ಕಾಗಿ ದಂಡ.**- ಸುಳ್ಳಾಗಿರುವ ಮತ್ತು ಸುಳ್ಳೆಂದು ತನಗೆ ತಿಳಿದಿರುವ ಮತ್ತು ಸುಳ್ಳೆಂದು ತಾನು ನಂಬುವಂಥ ಹೇಳಿಕೆಯನ್ನು ಒಳಗೊಂಡಿರುವ ಪ್ರಮಾಣಪತ್ರವನ್ನು ಸೃಷ್ಟಿಸುವ ಅಥವಾ ಅದಕ್ಕೆ ಸಹಿ ಮಾಡುವ ಅಥವಾ ಅದನ್ನು ದೃಢೀಕರಿಸುವ ಪ್ರತಿಯೊಬ್ಬ ವ್ಯಕ್ತಿಯು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸ ಶಿಕ್ಷೆಯಿಂದ ಅಥವಾ ಒಂದು ನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು; ಮತ್ತು ಆ ಕೃತ್ಯವು ಭಾರತ ದಂಡ ಸಂಹಿತೆಯಲ್ಲಿ ವಿವರಿಸಿರುವಂತೆ ಸುಳ್ಳು ಪತ್ರ ಸೃಷ್ಟನೆ ಮಾಡುವ ಕೃತ್ಯವಾಗಿದ್ದರೆ ಆಗ ಅಂಥ ವ್ಯಕ್ತಿಯು ಆ ಕುರಿತು ಅಪರಾಧ ನಿರ್ಣಯವಾದ ನಂತರ ಸದರಿ ಸಂಹಿತೆಯ 466ನೇ ಪ್ರಕರಣದಲ್ಲಿ ಉಪಬಂಧಿಸಿರುವ ದಂಡನೆಗೆ ಸಹ ಗುರಿಯಾಗತಕ್ಕದ್ದು.

**15. ಪ್ರಮಾಣ ಪತ್ರವನ್ನು ನೋಂದಾಯಿಸಲು ತಪ್ಪಿದ್ದಕ್ಕಾಗಿ ದಂಡ.**- ಯಾರೇ ನೋಂದಣಿ ಅಧಿಕಾರಿಯು, 6ನೇ ಪ್ರಕರಣಕ್ಕೆ ಅನುಸಾರವಾಗಿ ಸದರಿ ಪ್ರಮಾಣ ಪತ್ರವನ್ನು ದಾಖಲುಮಾಡಲು ತಪ್ಪಿದಲ್ಲಿ, ಅವನು ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಸಾದಾ ಕಾರಾವಾಸ ಶಿಕ್ಷೆಯಿಂದ ಅಥವಾ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**16. ರಿಜಿಸ್ಟರನ್ನು ರಹಸ್ಯವಾಗಿಟ್ಟಿದ್ದಕ್ಕೆ, ನಾಶಗೊಳಿಸಿದ್ದಕ್ಕೆ ಅಥವಾ ವ್ಯತ್ಯಾಸಗೊಳಿಸಿದ್ದಕ್ಕಾಗಿ ದಂಡ.**- ಯಾರೇ ವ್ಯಕ್ತಿಯು, ಸದರಿ ರಿಜಿಸ್ಟರಿನ ಯಾವುದೇ ಭಾಗವನ್ನು ರಹಸ್ಯವಾಗಿಟ್ಟರೆ, ನಾಶಗೊಳಿಸಿದರೆ, ಅಥವಾ ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ವ್ಯತ್ಯಾಸಗೊಳಿಸಿದರೆ, ಭಾರತ ದಂಡ ಸಂಹಿತೆಯಲ್ಲಿ ಪರಿಭಾಷಿಸಿರುವಂತೆ ಎರಡು ವರ್ಷಗಳಿಗೆ ಮೀರಬಹುದಾದ ಕಾರಾವಾಸ ಶಿಕ್ಷೆಯಿಂದ, ಅಥವಾ ಅವನು ನೋಂದಣಿ ಅಧಿಕಾರಿಯಾಗಿದ್ದರೆ, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ

ದಂಡಿತನಾಗತಕ್ಕದ್ದು ಮತ್ತು ಐದುನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಸಹ ಗುರಿಯಾಗತಕ್ಕದ್ದು.

**17. ಔಪಚಾರಿಕ ಕ್ರಮ ದೋಷಗಳಿಂದ ವಿವಾಹವು ಅಸಿಂಧುವಾಗದಿರುವುದು.**- ಈ ಅಧಿನಿಯಮದ ಮೇರೆಗೆ ನಡೆದಿರುವ ಯಾವುದೇ ವಿವಾಹವು, ಅಂಥ ವಿವಾಹವನ್ನು 6ನೇ ಪ್ರಕರಣದ ಮೇರೆಗೆ ಪ್ರಮಾಣೀಕರಿಸಿಲ್ಲವೆಂಬ ಅಥವಾ ಪ್ರಮಾಣ ಪತ್ರವನ್ನು ನೋಂದಣಿ ಅಧಿಕಾರಿಗೆ ಕಳುಹಿಸಿಲ್ಲವೆಂಬ, ಅಥವಾ ಅಂಥ ಪ್ರಮಾಣ ಪತ್ರವು ದೋಷಪೂರ್ಣ, ಕ್ರಮದೋಷಯುಕ್ತ ಅಥವಾ ಸರಿಯಾಗಿಲ್ಲವೆಂಬ ಏಕಮಾತ್ರ ಕಾರಣದಿಂದ ಅಸಿಂಧುವಾಗಿದೆ ಎಂಬುದಾಗಿ ಭಾವಿಸತಕ್ಕದ್ದಲ್ಲ.

## III ಪಾರ್ಸಿ ವೈವಾಹಿಕ ನ್ಯಾಯಾಲಯಗಳು

**18. ಅಧಿನಿಯಮದ ಮೇರೆಗೆ ವಿಶೇಷ ನ್ಯಾಯಾಲಯಗಳ ರಚನೆ.**- ಈ ಅಧಿನಿಯಮದ ಮೇರೆಗೆ ದಾವೆಗಳ ಸುನಾವಣೆಯ ಉದ್ದೇಶಕ್ಕಾಗಿ ಪ್ರೆಸಿಡೆನ್ಸಿ ಟೌನ್‌ಗಳಾದ ಕಲ್ಕತ್ತ, ಮದ್ರಾಸ್ ಮತ್ತು ಮುಂಬಯಿಗಳಲ್ಲಿ ಒಂದೊಂದರಂತೆ ಮತ್ತು ವಿವಿಧ ರಾಜ್ಯ ಸರ್ಕಾರಗಳ ರಾಜ್ಯ ಕ್ಷೇತ್ರಗಳ ಇತರೆ ಸ್ಥಳಗಳಲ್ಲಿ ಅಂಥ ಸರ್ಕಾರಗಳು ಅನುಕ್ರಮವಾಗಿ ವಿಹಿತವೆಂದು ಭಾವಿಸುವ ರೀತಿಯಲ್ಲಿ ವಿಶೇಷ ನ್ಯಾಯಾಲಯವನ್ನು ರಚಿಸತಕ್ಕದ್ದು.

**19. ಪಾರ್ಸಿ ಮುಖ್ಯ ವೈವಾಹಿಕ ನ್ಯಾಯಾಲಯಗಳು.**- ಪ್ರತಿಯೊಂದು ಪ್ರೆಸಿಡೆನ್ಸಿ ಪಟ್ಟಣಗಳಲ್ಲಿ ಹಾಗೆ ಸ್ಥಾಪಿಸಲಾದ ನ್ಯಾಯಾಲಯಕ್ಕೆ, ಸಂದರ್ಭಾನುಸಾರ, ಪಾರ್ಸಿ ಮುಖ್ಯ ವೈವಾಹಿಕ ನ್ಯಾಯಾಲಯ, ಕಲ್ಕತ್ತ, ಮದ್ರಾಸ್, ಮುಂಬಯಿ ಎಂದು ಹೆಸರು ಇಡತಕ್ಕದ್ದು. ಪಾರ್ಸಿ ಮುಖ್ಯ ವೈವಾಹಿಕ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳು, ಉಚ್ಚ ನ್ಯಾಯಾಲಯದ ಸಾಮಾನ್ಯ ಮೂಲ ಸಿವಿಲ್ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೇ ಆಗಿರತಕ್ಕದ್ದು. ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯು ಅಥವಾ ಮುಖ್ಯ ನ್ಯಾಯಮೂರ್ತಿಯು ಕಾಲಕಾಲಕ್ಕೆ ನೇಮಕ ಮಾಡತಕ್ಕ ಅದೇ ನ್ಯಾಯಾಲಯದ ಇತರೆ ನ್ಯಾಯಾಧೀಶನು ಅಂಥ ವೈವಾಹಿಕ ನ್ಯಾಯಾಲಯದ ನ್ಯಾಯಾಧೀಶನಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮೊಕದ್ದಮೆಗಳ ಅಧಿವಿಚಾರಣೆ ನಡೆಸುವಲ್ಲಿ ಅವನಿಗೆ ಐದು ಜನ ಪ್ರತಿನಿಧಿಗಳು,-

(ಎ) ವಾದಕಾಲೀನ ಅರ್ಜಿಗಳು ಮತ್ತು ವ್ಯವಹರಣೆಗಳ;

(ಬಿ) ಶಾಶ್ವತವಾಗಿ ಹಾಗೂ ದಾವೆಯು ನಡೆಯುತ್ತಿರುವಾಗ ಕೂಡ ಜೀವನಾಂಶದ ಮತ್ತು ಜೀವನ ನಿರ್ವಹಣೆಯ;

(ಸಿ) ಮಕ್ಕಳ ಅಭಿರಕ್ಷೆಯ, ನಿರ್ವಹಣೆಯ ಮತ್ತು ಶಿಕ್ಷಣದ; ಮತ್ತು

(ಡಿ) ಮೊಕದ್ದಮೆಗಳ ನಿಯತ ಸುನಾವಣೆಯಲ್ಲದ ಇತರ ಎಲ್ಲಾ ವಿಷಯಗಳ ಮತ್ತು ವ್ಯವಹರಣೆಗಳ

- ಹೊರತು ಇತರ ವಿಷಯಗಳಲ್ಲಿ ನೆರವಾಗತಕ್ಕದ್ದು.

**20. ಪಾರ್ಸಿ ಜಿಲ್ಲಾ ವೈವಾಹಿಕ ನ್ಯಾಯಾಲಯಗಳು.**- ಪ್ರೆಸಿಡೆನ್ಸಿ ಪಟ್ಟಣ ಹೊರತುಪಡಿಸಿ ಇತರೆ ಸ್ಥಳಗಳಲ್ಲಿ ಹಾಗೆ ಸ್ಥಾಪಿತವಾದ ಪ್ರತಿಯೊಂದು ನ್ಯಾಯಾಲಯಕ್ಕೆ, ಅಂಥ ಸ್ಥಳದ ಪಾರ್ಸಿ ಜಿಲ್ಲಾ ವೈವಾಹಿಕ ನ್ಯಾಯಾಲಯ ಎಂದು ಹೆಸರು ಇಡತಕ್ಕದ್ದು. 21ನೇ ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧ ಗಳಿಗೊಳಪಟ್ಟು, ಅಂಥ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳು, ಅದು ಕಾರ್ಯನಿರ್ವಹಿಸುವ ಜಿಲ್ಲೆಯ ಪರಿಮಿತಿಗಳಷ್ಟೆ ಆಗಿರತಕ್ಕದ್ದು. ಅಂಥ ಸ್ಥಳದಲ್ಲಿನ ಮೂಲ ಸಿವಿಲ್ ಅಧಿಕಾರ ವ್ಯಾಪ್ತಿಯ ಪ್ರಧಾನ ನ್ಯಾಯಾಲಯದ ನ್ಯಾಯಾಧೀಶನು ಅಂಥ ವೈವಾಹಿಕ ನ್ಯಾಯಾಲಯದ ನ್ಯಾಯಾಧೀಶನಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗಿನ ಮೊಕದ್ದಮೆಗಳ ಅಧಿವಿಚಾರಣೆ ನಡೆಸುವಲ್ಲಿ ಅವರಿಗೆ, ಐದು ಜನ ಪ್ರತಿನಿಧಿಗಳು,-

(ಎ) ವಾದಕಾಲೀನ ಅರ್ಜಿಗಳು ಮತ್ತು ವ್ಯವಹರಣೆಗಳ;

(ಬಿ) ಶಾಶ್ವತವಾಗಿ ಹಾಗೂ ದಾವೆಯು ನಡೆಯುತ್ತಿರುವಾಗ ಕೂಡ ನಿರ್ವಹಣಾ ವೆಚ್ಚ ಮತ್ತು ಜೀವನಾಂಶದ;

(ಸಿ) ಮಕ್ಕಳ ಅಭಿರಕ್ಷೆಯ, ನಿರ್ವಹಣೆಯ ಮತ್ತು ಶಿಕ್ಷಣದ; ಮತ್ತು

(ಡಿ) ಮೊಕದ್ದಮೆಗಳ ನಿಯತ ಸುನಾವಣೆಯಲ್ಲದ ಇತರ ಎಲ್ಲಾ ವಿಷಯಗಳ ಮತ್ತು ವ್ಯವಹರಣೆಗಳ

- ಹೊರತು ಇತರ ವಿಷಯಗಳಲ್ಲಿ ನೆರವಾಗತಕ್ಕದ್ದು.

**21. ಜಿಲ್ಲಾ ನ್ಯಾಯಾಲಯಗಳ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಬದಲಿಸುವ ಅಧಿಕಾರ.**- ರಾಜ್ಯ ಸರ್ಕಾರವು, ಯಾವುದೇ ಪಾರ್ಸಿ ಜಿಲ್ಲಾ ವೈವಾಹಿಕ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳನ್ನು ಕಾಲಕಾಲಕ್ಕೆ ಬದಲಿಸಬಹುದು, ಮತ್ತು ಆ ಸರ್ಕಾರದ ಅಧೀನದಲ್ಲಿರುವ ಎಷ್ಟೇ ಸಂಖ್ಯೆಯ ಜಿಲ್ಲೆಗಳನ್ನು ಅಂಥ ಪರಿಮಿತಿಗಳಲ್ಲಿ ಸೇರಿಸಬಹುದು.

**22. ಮುಖ್ಯ ವೈವಾಹಿಕ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಕೆಲವು ಜಿಲ್ಲೆಗಳ ಸೇರ್ಪಡೆ.**- ಪಾರ್ಸಿ ನಿವಾಸಿಗಳು ಕಡಿಮೆ ಇರುವ ಕಾರಣದಿಂದ ಯಾವುದೇ ಜಿಲ್ಲಾ ವೈವಾಹಿಕ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಯಾವುದೇ ಜಿಲ್ಲೆಯನ್ನು ಸೇರಿಸುವುದು ವಿಹಿತವಲ್ಲವೆಂದು ರಾಜ್ಯ ಸರ್ಕಾರವು ಭಾವಿಸಿದರೆ, ಅಂಥ ರಾಜ್ಯ ಸರ್ಕಾರದ ಅಧೀನದಲ್ಲಿನ ರಾಜ್ಯಕ್ಷೇತ್ರಗಳಲ್ಲಿ ಪಾರ್ಸಿ ಮುಖ್ಯ ವೈವಾಹಿಕ ನ್ಯಾಯಾಲಯ ಇರುವಲ್ಲಿ, ಆ ನ್ಯಾಯಾಲಯದ ಅಧಿಕಾರವ್ಯಾಪ್ತಿಯೊಳಗೆ ಅಂಥ ಜಿಲ್ಲೆಯನ್ನು ಸೇರಿಸತಕ್ಕದ್ದು.

**23. ನ್ಯಾಯಾಲಯದ ಮೊಹರುಗಳು.**- ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಪ್ರತಿಯೊಂದು ನ್ಯಾಯಾಲಯಕ್ಕಾಗಿ ಒಂದು ಮೊಹರನ್ನು ಮಾಡಿಸತಕ್ಕದ್ದು ಮತ್ತು ಅಂಥ ನ್ಯಾಯಾಲಯದ ಎಲ್ಲ ಡಿಕ್ರಿಗಳಿಗೆ ಮತ್ತು ಆದೇಶಗಳಿಗೆ ಮತ್ತು ಡಿಕ್ರಿಗಳ ಮತ್ತು ಆದೇಶಗಳ ಪ್ರತಿಗಳಿಗೆ ಅಂಥ ಮೊಹರು ಹಾಕತಕ್ಕದ್ದು ಮತ್ತು ಆ ಮೊಹರುಗಳನ್ನು ಪ್ರಿಸೈಡಿಂಗ್ ನ್ಯಾಯಾಧೀಶನ ಅಭಿರಕ್ಷೆಯಲ್ಲಿಡತಕ್ಕದ್ದು.

**24. ಪ್ರತಿನಿಧಿಗಳ ನೇಮಕಾತಿ.**- (1) ರಾಜ್ಯ ಸರ್ಕಾರವು ಪ್ರೆಸಿಡೆನ್ಸಿ ಪಟ್ಟಣಗಳಲ್ಲಿ ಮತ್ತು ತಮ್ಮ ಸರ್ಕಾರಗಳ ಆಡಳಿತಕ್ಕೊಳಪಟ್ಟಿರುವ ಜಿಲ್ಲೆಗಳಲ್ಲಿ ಸಂಬಂಧಪಟ್ಟ ಸರ್ಕಾರಗಳು ವಿಹಿತವೆಂದು ಭಾವಿಸುವ ರೀತಿಯಲ್ಲಿ ಸ್ಥಳೀಯ ಪಾರ್ಸಿಗಳಿಗೆ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಲು ಒಂದು ಅವಕಾಶ ನೀಡಿದ ನಂತರ, ಈ ಅಧಿನಿಯಮದ ಮೇರೆಗೆ ಉದ್ಭವಿಸುವ ದಾವೆಗಳ ನ್ಯಾಯ ನಿರ್ಣಯ ಮಾಡುವಲ್ಲಿ ನೆರವು ನೀಡುವುದಕ್ಕೆ ಪ್ರತಿನಿಧಿಗಳಾಗಿ ವ್ಯಕ್ತಿಗಳನ್ನು ನೇಮಕ ಮಾಡತಕ್ಕದ್ದು.

(2) ಹಾಗೆ ನೇಮಕಗೊಂಡ ವ್ಯಕ್ತಿಗಳು ಪಾರ್ಸಿಗಳಾಗಿರತಕ್ಕದ್ದು, ಅವರ ಹೆಸರುಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಅವರ ಸಂಖ್ಯೆಗಳು ಉಚ್ಚ ನ್ಯಾಯಾಲಯದ ಮೂಲ ಸಿವಿಲ್ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗಾದರೆ ಮೂವತ್ತಕ್ಕಿಂತ ಹೆಚ್ಚಿರತಕ್ಕದ್ದಲ್ಲ, ಮತ್ತು ಅಂಥ ಪರಿಮಿತಿಗಳ ಆಚೆಗಿನ ಜಿಲ್ಲೆಗಳಲ್ಲಾದರೆ ಇಪ್ಪತ್ತಕ್ಕಿಂತ ಹೆಚ್ಚಿರತಕ್ಕದ್ದಲ್ಲ.

**25. ಹೊಸ ಪ್ರತಿನಿಧಿಗಳನ್ನು ನೇಮಕಮಾಡುವ ಅಧಿಕಾರ.**- ಪ್ರತಿನಿಧಿಯ ನೇಮಕಾತಿ ಅವಧಿಯು ಹತ್ತು ವರ್ಷಗಳಾಗಿರತಕ್ಕದ್ದು; ಆದರೆ ಅಂಥದ್ದೇ ಅವಧಿ ಅಥವಾ ಅವಧಿಗಳಿಗೆ ಅವನು ಪುನಃ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು. ಒಬ್ಬ ಪ್ರತಿನಿಧಿಯು ಮರಣ ಹೊಂದಿದಾಗ ಅಥವಾ ತನ್ನ ಪದಾವಧಿಯನ್ನು ಪೂರ್ಣಗೊಳಿಸಿದಾಗ ಅಥವಾ ತನ್ನ ಪದವನ್ನು ಬಿಟ್ಟುಬಿಡಲು ಇಚ್ಛಿಸಿದಾಗ ಅಥವಾ ಕಾರ್ಯನಿರ್ವಹಿಸಲು ನಿರಾಕರಿಸಿದಾಗ ಅಥವಾ ಅಸಮರ್ಥ ಅಥವಾ ಅನರ್ಹನಾದಾಗ ಅಥವಾ ಪಾರ್ಸಿಯಾಗಿರುವುದು ನಿಂತುಹೋದಾಗ ಅಥವಾ ಭಾರತ ದಂಡ ಸಂಹಿತೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಕಾನೂನಿನ ಮೇರೆಗೆ ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧದ ಅಪರಾಧಿಯೆಂದು ನಿರ್ಣೀತನಾದಾಗ ಅಥವಾ ದಿವಾಳಿಯೆಂದು ನ್ಯಾಯನಿರ್ಣೀತನಾದಾಗ, ಅಂಥ ಸಮಯದಲ್ಲಿ ರಾಜ್ಯ ಸರ್ಕಾರವು ಪಾರ್ಸಿಯಾಗಿರುವ ಯಾರೇ ವ್ಯಕ್ತಿಯನ್ನು ಅವನ ಸ್ಥಾನದಲ್ಲಿ ಪ್ರತಿನಿಧಿಯಾಗಿ ನೇಮಕ ಮಾಡಬಹುದು; ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯ ಹೆಸರನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

**26. ಪ್ರತಿನಿಧಿಗಳನ್ನು ಲೋಕನೌಕರರೆಂದು ಭಾವಿಸುವುದು.**- ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಎಲ್ಲ ಪ್ರತಿನಿಧಿಗಳನ್ನು ಭಾರತ ದಂಡ ಸಂಹಿತೆಯ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂಬುದಾಗಿ ಭಾವಿಸತಕ್ಕದ್ದು.

**27. 19 ಮತ್ತು 20ನೇ ಪ್ರಕರಣಗಳ ಮೇರೆಗೆ ಪ್ರತಿನಿಧಿಗಳ ಆಯ್ಕೆಯು 24ನೇ ಪ್ರಕರಣದ ಮೇರೆಗೆ ನೇಮಕಗೊಂಡವರಂತಿರಬೇಕು.**- ಈ ಅಧಿನಿಯಮದ ಮೇರೆಗೆ ದಾವೆಗಳ ಬಗೆಗಿನ ನ್ಯಾಯ ನಿರ್ಣಯದಲ್ಲಿ ನೆರವು ನೀಡುವುದಕ್ಕೆ 19 ಮತ್ತು 20ನೇ ಪ್ರಕರಣಗಳ ಮೇರೆಗೆ ಆಯ್ಕೆಮಾಡಲಾದ ಪ್ರತಿನಿಧಿಗಳನ್ನು, 24ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ನೇಮಕಮಾಡಿದ ಪ್ರತಿನಿಧಿಗಳ ಪೈಕಿಯಿಂದ ನ್ಯಾಯಾಲಯದ ಪ್ರಿಸೈಡಿಂಗ್ ನ್ಯಾಯಾಧೀಶನ ಆದೇಶಗಳ ಮೇರೆಗೆ ಯುಕ್ತ ಸರದಿಯಲ್ಲಿ ತೆಗೆದುಕೊಳ್ಳತಕ್ಕದ್ದು:

ಪರಂತು, ಯಾವುದೇ ಕಾರಣವನ್ನು ಕೊಡದೆ, ದಾವೆಯ ಪ್ರತಿಯೊಬ್ಬ ಪಕ್ಷಕಾರನು ಅಂಥ ನ್ಯಾಯಾಲಯಕ್ಕೆ ಹಾಜರಾಗುವ ಪ್ರತಿನಿಧಿಗಳ ಪೈಕಿ ಯಾರೇ ಇಬ್ಬರ ಬಗ್ಗೆ, ಅವರನ್ನು ಹಾಗೆ ಆಯ್ಕೆ ಮಾಡುವ ಮುಂಚೆ ಆಕ್ಷೇಪವೆತ್ತಬಹುದು ಮತ್ತು ಹಾಗೆ ಆಕ್ಷೇಪಣೆಗೊಳಗಾದ ಪ್ರತಿನಿಧಿಯನ್ನು ಆಯ್ಕೆ ಮಾಡತಕ್ಕದ್ದಲ್ಲ.

**28. ವೈವಾಹಿಕ ನ್ಯಾಯಾಲಯಗಳಲ್ಲಿ ನ್ಯಾಯವಾದಿಗಳು.**- ಉಚ್ಚ ನ್ಯಾಯಾಲಯದಲ್ಲಿ ವೃತ್ತಿ ನಡೆಸುವುದಕ್ಕೆ ಅರ್ಹರಿರುವ ಎಲ್ಲ ನ್ಯಾಯವಾದಿಗಳು, ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ನ್ಯಾಯಾಲಯದಲ್ಲಿ ವೃತ್ತಿ ನಡೆಸುವುದಕ್ಕೆ ಅರ್ಹರಾಗಿರತಕ್ಕದ್ದು, ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ವೃತ್ತಿ ನಡೆಸುವುದಕ್ಕೆ ಅರ್ಹರಾಗಿರುವ ಎಲ್ಲ ನ್ಯಾಯವಾದಿಗಳು ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ಪಾರ್ಸಿ ಜಿಲ್ಲಾ ವೈವಾಹಿಕ ನ್ಯಾಯಾಲಯದಲ್ಲಿ ವೃತ್ತಿ ನಡೆಸಲು ಅರ್ಹರಾಗಿರತಕ್ಕದ್ದು.

**29. ದಾವೆಗಳನ್ನು ಯಾವ ನ್ಯಾಯಾಲಯಗಳಲ್ಲಿ ಹೂಡುವುದು.**- (1) ಈ ಅಧಿನಿಯಮದ ಮೇರೆಗೆ ಹೂಡಲಾದ ಎಲ್ಲ ದಾವೆಗಳನ್ನು, ದಾವೆ ಹೂಡುವ ಕಾಲದಲ್ಲಿ ಪ್ರತಿವಾದಿಯು ಯಾವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ವಾಸವಾಗಿದ್ದನೋ ಅಥವಾ ವಿವಾಹವು ಎಲ್ಲಿ ವಿಧಿವತ್ತಾಗಿ ನೆರವೇರಿತೋ ಆ ನ್ಯಾಯಾಲಯದಲ್ಲಿ ಹೂಡತಕ್ಕದ್ದು.

(2) ಪ್ರತಿವಾದಿಯು ಈ ಅಧಿನಿಯಮವು ಅನ್ವಯಿಸುವ ಸಮಯದಲ್ಲಿ ಅಂಥ ರಾಜ್ಯ ಕ್ಷೇತ್ರವನ್ನು ಬಿಟ್ಟಿದ್ದರೆ ಅಂಥ ದಾವೆಯನ್ನು ವಾದಿ ಮತ್ತು ಪ್ರತಿವಾದಿಯು ಕೊನೆಯ ಬಾರಿಗೆ ಎಲ್ಲಿ ವಾಸವಾಗಿದ್ದರೋ ಆ ಸ್ಥಳದಲ್ಲಿರುವ ನ್ಯಾಯಾಲಯಕ್ಕೆ ತರತಕ್ಕದ್ದು.

(3) ಯಾವುದೇ ಸಂದರ್ಭದಲ್ಲಿ, ಪ್ರತಿವಾದಿಯು ಈ ಅಧಿನಿಯಮವು ಅನ್ವಯವಾಗುವ ರಾಜ್ಯಕ್ಷೇತ್ರದೊಳಗ್ಗೆ ವಾಸವಾಗಿರಲಿ ಅಥವಾ ಇಲ್ಲದಿರಲಿ, ಅಂಥ ದಾವೆಯನ್ನು, ವಾದಿಯು ವಾಸವಾಗಿರುವ ಸ್ಥಳದಲ್ಲಿರುವ ನ್ಯಾಯಾಲಯಕ್ಕೆ ಅಥವಾ ವಾದಿ ಮತ್ತು ಪ್ರತಿವಾದಿಯು ಜೊತೆಯಲ್ಲಿ ಕೊನೆಯದಾಗಿ ಎಲ್ಲಿ ವಾಸವಾಗಿದ್ದರೋ ಆ ಸ್ಥಳದಲ್ಲಿರುವ ನ್ಯಾಯಾಲಯಕ್ಕೆ ಅಂಥ ನ್ಯಾಯಾಲಯವು ಕಾರಣಗಳನ್ನು ಬರವಣಿಗೆಯಲ್ಲಿ ದಾಖಲು ಮಾಡಿದ ನಂತರ, ಹಾಗೆ ಮಾಡಲು ಅನುಮತಿ ನೀಡಿದರೆ ತರಬಹುದು.

## IV- ವೈವಾಹಿಕ ದಾವೆಗಳು

**30. ಅನೂರ್ಜಿತಗೊಳಿಸುವುದಕ್ಕಾಗಿ ದಾವೆ.**- ವಿವಾಹವನ್ನು, ನಿಷೇಕ ಪ್ರಸ್ತದ ಮೂಲಕ ಪೂರ್ಣಗೊಳಿಸಲು ನೈಸರ್ಗಿಕ ಕಾರಣಗಳಿಂದ ಸಾಧ್ಯವಾಗದಿದ್ದ ಯಾವುದೇ ಸಂದರ್ಭದಲ್ಲಿ, ಅಂಥ ವಿವಾಹವನ್ನು, ಅದರ ಪಕ್ಷಕಾರರಲ್ಲಿ ಯಾರೇ ಪಕ್ಷಕಾರನ ಸೂಚನೆಯ ಮೇರೆಗೆ, ಅನೂರ್ಜಿತವೆಂದು ಘೋಷಿಸಬಹುದು.

**31. ವಿಘಟನೆಗಾಗಿ ದಾವೆಗಳು.**- ಗಂಡನು ಅಥವಾ ಹೆಂಡತಿಯು, ತನ್ನ ಹೆಂಡತಿಯ ಜೊತೆ ಅಥವಾ ತನ್ನ ಗಂಡನ ಜೊತೆ ಏಳು ವರ್ಷಗಳ ಅವಧಿಯವರೆಗೆ ಸತತವಾಗಿ ಇರದಿದ್ದರೆ ಮತ್ತು ಅವನು ಅಥವಾ ಅವಳು ಜೀವಂತವಾಗಿದ್ದಿದ್ದರೆ, ಆ ಬಗ್ಗೆ ಯಾವ ವ್ಯಕ್ತಿಗಳಿಗೆ ಸಹಜವಾಗಿ ತಿಳಿದುಬರುತ್ತಿತ್ತೋ ಆ ಯಾವ ವ್ಯಕ್ತಿಗಳಿಗೆ ಅವನು ಅಥವಾ ಅವಳು ಜೀವಂತವಾಗಿರುವುದು ಆ ಕಾಲದೊಳಗೆ ತಿಳಿದುಬರದಿದ್ದರೆ, ಅಂಥ ಗಂಡನ ಅಥವಾ ಹೆಂಡತಿಯ ವಿವಾಹವು, ಇಬ್ಬರಲ್ಲಿ ಯಾರಾದರೊಬ್ಬರ ಸೂಚನೆ ಮೇರೆಗೆ ವಿಘಟನೆಗೊಳ್ಳತಕ್ಕದ್ದು.

**32. ವಿವಾಹ ವಿಚ್ಛೇದನದ ಕಾರಣಗಳು.**- ಯಾರೇ ವಿವಾಹಿತ ವ್ಯಕ್ತಿಯು ಈ ಮುಂದಿನ ಯಾವುದೇ ಒಂದು ಅಥವಾ ಹೆಚ್ಚು ಕಾರಣಗಳ ಮೇಲೆ ಎಂದರೆ:-

(ಎ) ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿದ ನಂತರ ಒಂದು ವರ್ಷದೊಳಗೆ ನಿಷೇಕ ಪ್ರಸ್ತ ಮಾಡಿಕೊಳ್ಳಲು ಪ್ರತಿವಾದಿಯು ಉದ್ದೇಶಪೂರ್ವಕವಾಗಿ ನಿರಾಕರಿಸಿದ ಕಾರಣ ಅಂಥ ವಿವಾಹದ ನಿಷೇಕ ಪ್ರಸ್ತವಾಗಿರದಿದ್ದರೆ;

(ಬಿ) ವಿವಾಹದ ಕಾಲಕ್ಕೆ ಪ್ರತಿವಾದಿಯು ಅಸ್ವಸ್ಥ ಮನಸ್ಸಿನವನಾಗಿದ್ದು ಮತ್ತು ದಾವೆಯ ದಿನಾಂಕದವರೆಗೂ ಆ ಸ್ಥಿತಿಯು ಮುಂದುವರಿದಿದ್ದರೆ

- ವಿವಾಹ ವಿಚ್ಛೇದನಕ್ಕಾಗಿ ದಾವೆ ಹೂಡಬಹುದು:

ಪರಂತು, (1) ವಾದಿಗೆ ವಿವಾಹದ ಕಾಲದಲ್ಲಿ ಆ ಬಗ್ಗೆ ಗೊತ್ತಿಲ್ಲದಿದ್ದ ಹೊರತು, ಮತ್ತು (2) ವಿವಾಹದ ದಿನಾಂಕದಿಂದ ಮೂರು ವರ್ಷದೊಳಗಾಗಿ ದಾವೆಯನ್ನು ಹೂಡಿದ್ದ ಹೊರತು, ಈ ಕಾರಣದ ಮೇಲೆ ವಿವಾಹ ವಿಚ್ಛೇದನಕ್ಕೆ ಮಂಜೂರಾತಿ ನೀಡತಕ್ಕದ್ದಲ್ಲ.

(ಬಿಬಿ) ಪ್ರತಿವಾದಿಯು, ದಾವೆ ಹೂಡುವುದಕ್ಕೆ ನಿಕಟಪೂರ್ವದ ಎರಡುವರ್ಷಗಳ ಅವಧಿಯಲ್ಲಿ ಅಥವಾ ಅದಕ್ಕೂ ಮೇಲ್ಪಟ್ಟು ಪ್ರತಿವಾದಿಯು ವಾಸಿ ಮಾಡಲಾಗದ ಅಸ್ವಸ್ಥ ಮನಸ್ಸಿನವನಾಗಿದ್ದರೆ ಅಥವಾ ವಾದಿಯು ಪ್ರತಿವಾದಿಯ ಜೊತೆ ಬಾಳುವೆ ಮಾಡುತ್ತಾರೆಂದು ಸಮಂಜಸವಾಗಿ ನಿರೀಕ್ಷೆ ಮಾಡಲಿಕ್ಕಾಗದಂಥ ವಿಧದ ಮತ್ತು ಅಷ್ಟೊಂದು ಮಟ್ಟಿಗೆ ನಿರಂತರವಾಗಿ ಅಥವಾ ಆಗಾಗ ಮರುಕಳಿಸುವ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದರೆ;

**ವಿವರಣೆ.**- ಈ ಖಂಡದಲ್ಲಿ,-

(ಎ) "ಮಾನಸಿಕ ಅಸ್ವಸ್ಥತೆ' ಪದಾವಳಿಯ ಅರ್ಥ ಏನೆಂದರೆ, ಮಾನಸಿಕ ಅನಾರೋಗ್ಯ, ಬುದ್ಧಿ ಬೆಳವಣಿಗೆ ನಿಂತುಹೋಗಿರುವುದು ಅಥವಾ ಅಪೂರ್ಣವಾಗಿರುವುದು, ಬುದ್ಧಿ ಸ್ಥಿಮಿತವಿಲ್ಲದಿರುವುದು ಅಥವಾ ಯಾವುದೇ ಇತರ ಮಾನಸಿಕ ಅಸ್ವಸ್ಥತೆ ಮತ್ತು ದೌರ್ಬಲ್ಯ ಮತ್ತು ಅದರಲ್ಲಿ ಸ್ಕಿಜೊಫ್ರೇನಿಯಾ ಒಳಗೊಳ್ಳುತ್ತದೆ;

(ಬಿ) "ಬುದ್ಧಿ ಸ್ಥಿಮಿತವಿಲ್ಲದಿರುವುದು" ಎಂಬ ಪದಾವಳಿಯ ಅರ್ಥ ಏನೆಂದರೆ ಪ್ರತಿವಾದಿಯಿಂದ ಅತಿರೇಕದ ಜಗಳ ಆಗುವುದಕ್ಕೆ ಅಥವಾ ತೀವ್ರ ಬೇಜವಾಬ್ದಾರಿಯ ನಡತೆಗೆ ಕಾರಣವಾಗುವ ಮತ್ತು ವೈದ್ಯಕೀಯ ಚಿಕಿತ್ಸೆಯ ಅಗತ್ಯ ಇರಲಿ ಅಥವಾ ಇಲ್ಲದಿರಲಿ ಅಥವಾ ವೈದ್ಯಕೀಯ ಚಿಕಿತ್ಸೆಗೆ ಅವಕಾಶ ಇರಲಿ ಅಥವಾ ಇಲ್ಲದಿರಲಿ (ಬುದ್ಧಿವಂತಿಕೆಯ ಮಟ್ಟವು ಸಾಮಾನ್ಯ ಮಟ್ಟಕ್ಕಿಂತ ಕೆಳಮಟ್ಟದಲ್ಲಿರುವುದು ಒಳಗೊಂಡಿರಲಿ ಅಥವಾ ಇಲ್ಲದಿರಲಿ) ಮನಸ್ಸಿನ ನಿರಂತರ ಅಸ್ವಸ್ಥತೆ ಅಥವಾ ದೌರ್ಬಲ್ಯ;

(ಸಿ) ಅಂಥ ಪ್ರತಿವಾದಿಯು ವಿವಾಹದ ಕಾಲಕ್ಕೆ ವಾದಿಯನ್ನು ಹೊರತುಪಡಿಸಿ ಯಾರೇ ಇತರೆ ವ್ಯಕ್ತಿಯಿಂದ ಗರ್ಭಿಣಿಯಾಗಿದ್ದರೆ:

ಪರಂತು, (1) ವಾದಿಗೆ ವಿವಾಹ ಕಾಲದಲ್ಲಿ ಆಪಾದಿಸಲಾದ ವಾಸ್ತವಾಂಶವು ತಿಳಿಯದಿದ್ದ ಹೊರತು, (2) ವಿವಾಹದ ದಿನಾಂಕದಿಂದ ಎರಡು ವರ್ಷಗಳೊಳಗಾಗಿ ದಾವೆ ಹೂಡಿರದಿದ್ದ ಹೊರತು, ಮತ್ತು (3) ವಾದಿಗೆ ವಾಸ್ತವಾಂಶ ಗೊತ್ತಾದ ನಂತರ ದಾಂಪತ್ಯ ಸಂಭೋಗ ನಡೆಯದಿದ್ದ ಹೊರತು

– ಅಂಥ ವಿವಾಹ ವಿಚ್ಛೇದನಕ್ಕೆ ಈ ಕಾರಣದ ಮೇಲೆ ಮಂಜೂರಾತಿ ನೀಡತಕ್ಕದ್ದಲ್ಲ.

(ಡಿ) ಪ್ರತಿವಾದಿಯು ವಿವಾಹವಾದ ತರುವಾಯ ಪರಸತಿಸಂಗ ಅಥವಾ ಅವಿವಾಹಿತ ಸ್ತ್ರೀ ಸಂಗ ಅಥವಾ ದ್ವಿಪತ್ನಿತ್ವ ಅಥವಾ ಬಲಾತ್ಕಾರ ಸಂಭೋಗ ಅಥವಾ ಅನೈಸರ್ಗಿಕ ಮೈಥುನದಲ್ಲಿ ತೊಡಗಿದ್ದರೆ:

ಪರಂತು, ವಾದಿಗೆ ಇಂಥ ವಾಸ್ತವಾಂಶಗಳು ಗೊತ್ತಾದ ನಂತರ ಎರಡು ವರ್ಷಗಳು ಮೀರಿದ ಮೇಲೆ ದಾವೆ ಹೂಡಿದ್ದರೆ ಅಂಥ ವಿವಾಹ ವಿಚ್ಛೇದನಕ್ಕೆ ಈ ಕಾರಣದ ಮೇಲೆ ಮಂಜೂರಾತಿ ನೀಡತಕ್ಕದ್ದಲ್ಲ.

(ಡಿಡಿ) ಪ್ರತಿವಾದಿಯು, ವಿವಾಹವು ವಿಧಿವತ್ತಾಗಿ ನೆರವೇರಿದಂದಿನಿಂದಲೂ ವಾದಿಯನ್ನು ಕ್ರೂರವಾಗಿ ನಡೆಸಿಕೊಂಡಿದ್ದರೆ ಅಥವಾ ಪ್ರತಿವಾದಿಯ ಜತೆ ವಾದಿಯು ಬಾಳುವೆ ಮಾಡುವುದಕ್ಕೆ ಒತ್ತಾಯ ಮಾಡುವುದು ಸರಿಯಲ್ಲವೆಂದು ನ್ಯಾಯಾಲಯವು ತೀರ್ಪು ಕೊಡುವಂತೆ ನಡೆದುಕೊಂಡಿದ್ದರೆ:

ಪರಂತು, ಈ ಆಧಾರದ ಮೇಲೆ ವಿವಾಹ ವಿಚ್ಛೇದನ ಕೋರಿದ ಪ್ರತಿಯೊಂದು ದಾವೆಯಲ್ಲಿ , ವಿವಾಹ ವಿಚ್ಛೇದನಕ್ಕಾಗಿ ಡಿಕ್ರಿಯನ್ನು ಮಂಜೂರು ಮಾಡಬೇಕೇ ಅಥವಾ ಪ್ರತ್ಯೇಕೀಕರಣಕ್ಕಾಗಿ ಮಾತ್ರವೇ ಮಂಜೂರು ಮಾಡಬೇಕೇ ಎನ್ನುವುದು ನ್ಯಾಯಾಲಯದ ವಿವೇಚನೆಗೆ ಒಳಪಟ್ಟಿರತಕ್ಕದ್ದು;

(ಇ) ಪ್ರತಿವಾದಿಯು ವಿವಾಹದ ತರುವಾಯ ಸ್ವಇಚ್ಛೆಯಿಂದ ವಾದಿಗೆ ತೀವ್ರ ನೋವನ್ನುಂಟು ಮಾಡಿದ್ದರೆ ಅಥವಾ ಗುಹ್ಯರೋಗದಿಂದ ವಾದಿಗೆ ಸೋಂಕು ತಗುಲಿಸಿದ್ದರೆ ಅಥವಾ ಪ್ರತಿವಾದಿಯು ಗಂಡನಾಗಿದ್ದು, ತನ್ನ ಹೆಂಡತಿಯನ್ನೇ ವೇಶ್ಯಾವೃತ್ತಿಗೆ ಒತ್ತಾಯಿಸಿದ್ದರೆ:

ಪರಂತು, (i) ತೀವ್ರ ನೋವನ್ನು ಉಂಟುಮಾಡಿದ ನಂತರ, ಅಥವಾ (ii) ವಾದಿಗೆ ಸೋಂಕುಂಟಾಗಿದೆ ಎಂದು ಗೊತ್ತಾದ ನಂತರ ಅಥವಾ (iii) ಕಡ್ಡಾಯ ವೇಶ್ಯಾವೃತ್ತಿಗೆ ಒತ್ತಾಯಿಸಿದ ನಂತರ, ಎರಡು ವರ್ಷಗಳಿಗೂ ಮೀರಿದ ತರುವಾಯ ದಾವೆಯನ್ನು ಹೂಡಿದಲ್ಲಿ ಈ ಕಾರಣದ ಮೇಲೆ, ವಿವಾಹ ವಿಚ್ಛೇದನಕ್ಕೆ ಮಂಜೂರಾತಿ ನೀಡತಕ್ಕದ್ದಲ್ಲ;

(ಎಫ್) ಪ್ರತಿವಾದಿಯು ಭಾರತ ದಂಡ ಸಂಹಿತೆಯಲ್ಲಿ ವಿವರಿಸಿರುವಂತೆ ಒಂದು ಅಪರಾಧಕ್ಕಾಗಿ ಏಳು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಕಾರಾವಾಸದ ಶಿಕ್ಷೆಯನ್ನು ಅನುಭವಿಸುತ್ತಿದ್ದರೆ:

ಪರಂತು, ಪ್ರತಿವಾದಿಯು ಸದರಿ ಅವಧಿಯ ಪೈಕಿ ಕನಿಷ್ಠ ಒಂದು ವರ್ಷದ ಶಿಕ್ಷೆ ಅನುಭವಿಸುವುದಕ್ಕೆ ಮುಂಚೆ ದಾವೆ ಹೂಡಿದ್ದ ಹೊರತು ಈ ವಿವಾಹ ವಿಚ್ಛೇದನಕ್ಕೆ ಮಂಜೂರಾತಿ ನೀಡತಕ್ಕದ್ದಲ್ಲ;

(ಜಿ) ಪ್ರತಿವಾದಿಯು ಕನಿಷ್ಠ ಎರಡು ವರ್ಷಗಳವರೆಗೆ ವಾದಿಯನ್ನು ಪರಿತ್ಯಜಿಸಿದಲ್ಲಿ;

(ಎಚ್) ಪ್ರತಿವಾದಿಯ ವಿರುದ್ಧ, ಮ್ಯಾಜಿಸ್ಟ್ರೇಟನು ವಾದಿಗೆ ಪ್ರತ್ಯೇಕ ಜೀವನಾಂಶಕ್ಕಾಗಿ ಆದೇಶವನ್ನು ಹೊರಡಿಸಿದ್ದರೆ, ಮತ್ತು ಪಕ್ಷಕಾರರು ಅಂಥ ಡಿಕ್ರಿಯ ಅಥವಾ ಆದೇಶದ ತರುವಾಯ ಒಂದು ವರ್ಷ ಅಥವಾ ಅದಕ್ಕೂ ಹೆಚ್ಚು ಅವಧಿಯವರೆಗೆ ದಾಂಪತ್ಯ ಸಂಭೋಗ ಮಾಡಿರದಿದ್ದರೆ;

(ಐ) [ * * * ]

(ಜೆ) ಆ ಪ್ರತಿವಾದಿಯು ಇನ್ನೊಂದು ಧರ್ಮಕ್ಕೆ ಮತಾಂತರಗೊಂಡು ಪಾರ್ಸಿ ಆಗಿರುವುದು ನಿಂತುಹೋದರೆ:

ಪರಂತು, ವಾದಿಗೆ ವಾಸ್ತವಾಂಶ ತಿಳಿದ ನಂತರ ಎರಡು ವರ್ಷಗಳು ಮೀರಿದ ಮೇಲೆ ದಾವೆ ಹೂಡಿದರೆ ಈ ಕಾರಣದ ಮೇಲೆ ವಿವಾಹ ವಿಚ್ಛೇದನಕ್ಕೆ ಮಂಜೂರು ಮಾಡತಕ್ಕದ್ದಲ್ಲ.

**32ಎ. ಡಿಕ್ರಿಗೆ ಅನುಸಾರವಾಗಿ ಒಂದು ವರ್ಷದ ಒಳಗೇ ಒಟ್ಟಿಗೆ ಬಾಳುವೆ ಮಾಡುವುದನ್ನು ಪುನರಾರಂಭಿಸದಿರುವುದು ಅಥವಾ ದಾಂಪತ್ಯ ಅಧಿಕಾರಗಳ ಪುನಃ ಸ್ಥಾಪನೆಯಾಗದಿರುವುದು ವಿವಾಹ ವಿಚ್ಛೇದನಕ್ಕೆ ಆಧಾರವಾಗಿರಬೇಕು.–** (1) ವಿವಾಹದ ಯಾರೇ ಪಕ್ಷಕಾರನು, ವಿವಾಹವು ಪಾರ್ಸಿ ವಿವಾಹ ಮತ್ತು ವಿವಾಹ ವಿಚ್ಛೇದನ (ತಿದ್ದುಪಡಿ) ಅಧಿನಿಯಮ, 1988ರ ಪ್ರಾರಂಭಕ್ಕೆ ಮುಂಚೆ ವಿಧಿವತ್ತಾಗಿ ನಡೆದಿರಲಿ ಅಥವಾ ಆ ನಂತರ ನಡೆದಿರಲಿ,–

(i) ತಾವು ಪಕ್ಷಕಾರರಾಗಿರುವ ವ್ಯವಹರಣೆಯಲ್ಲಿ ನ್ಯಾಯಿಕ ಪ್ರತ್ಯೇಕೀಕರಣಕ್ಕಾಗಿ ಡಿಕ್ರಿಯನ್ನು ಹೊರಡಿಸಿದ ತರುವಾಯ ಒಂದು ವರ್ಷ ಅಥವಾ ಅದಕ್ಕೂ ಮೇಲ್ಪಟ್ಟು ಅವರುಗಳು ಒಟ್ಟಿಗೇ ಬಾಳುವೆ ಮಾಡುವುದು ಪುನರಾರಂಭವಾಗಿಲ್ಲವೆಂಬ; ಅಥವಾ

(ii) ತಾವು ಪಕ್ಷಕಾರರಾಗಿರುವ ವ್ಯವಹರಣೆಯಲ್ಲಿ ದಾಂಪತ್ಯ ಹಕ್ಕುಗಳ ಪುನಃ ಸ್ಥಾಪನೆಗಾಗಿ ಡಿಕ್ರಿಯನ್ನು ಹೊರಡಿಸಿದ ತರುವಾಯ ಒಂದು ವರ್ಷ ಅಥವಾ ಅದಕ್ಕೂ ಮೇಲ್ಪಟ್ಟು ತಮ್ಮ ನಡುವೆ ದಾಂಪತ್ಯ ಹಕ್ಕು ಪುನಃ ಪ್ರದಾನ ಆಗಿಲ್ಲವೆಂಬ

- ಆಧಾರದ ಮೇಲೂ ಕೂಡ ವಿವಾಹ ವಿಚ್ಛೇದನಕ್ಕಾಗಿ ದಾವೆ ಹೂಡಬಹುದು.

(2) ಈ ಅಧಿನಿಯಮದ 40ನೇ ಪ್ರಕರಣದ ಅಥವಾ ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರ 488ನೇ ಪ್ರಕರಣದ ಅಥವಾ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 125ನೇ ಪ್ರಕರಣದ ಮೇರೆಗೆ ವಾದಿಗೆ ಮಾಡಿದ ಜೀವನಾಂಶದ ಆದೇಶವನ್ನು ಪಾಲಿಸುವುದಕ್ಕೆ ವಾದಿಯು ವಿಫಲನಾದರೆ ಅಥವಾ ಅದನ್ನು ನಿರ್ಲಕ್ಷಿಸಿದರೆ (1)ನೇ ಉಪ-ಪ್ರಕರಣದ ಮೇರೆಗೆ ವಿವಾಹ ವಿಚ್ಛೇದನಕ್ಕಾಗಿ ಡಿಕ್ರಿಯನ್ನು ಮಂಜೂರು ಮಾಡತಕ್ಕದ್ದಲ್ಲ.

**32ಬಿ. ಪರಸ್ಪರ ಸಮ್ಮತಿಯಿಂದ ವಿವಾಹ ವಿಚ್ಛೇದನ.**- (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ವಿವಾಹ ವಿಚ್ಛೇದನಕ್ಕಾಗಿ ದಾವೆಯನ್ನು ವಿವಾಹದ ಪಕ್ಷಕಾರರಿಬ್ಬರೂ ಒಟ್ಟಿಗೆ, ಅಂಥ ವಿವಾಹವು ಪಾರ್ಸಿ ವಿವಾಹ ಮತ್ತು ವಿವಾಹ ವಿಚ್ಛೇದನ (ತಿದ್ದುಪಡಿ) ಅಧಿನಿಯಮ, 1988ರ ಪ್ರಾರಂಭಕ್ಕೆ ಮುಂಚೆ ವಿಧಿವತ್ತಾಗಿ ನಡೆಯಲಿ ಅಥವಾ ಆ ನಂತರ ನಡೆದಿರಲಿ ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿಯ ಕಾಲದಿಂದ ತಾವು ಪ್ರತ್ಯೇಕವಾಗಿ ವಾಸಿಸುತ್ತಿದ್ದೇವೆಂಬ, ತಾವು ಜೊತೆಯಲ್ಲಿ ಬಾಳುವೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲವೆಂಬ ಮತ್ತು ವಿವಾಹದ ವಿಘಟನೆಗೆ ತಾವು ಪರಸ್ಪರ ಒಪ್ಪಿಕೊಂಡಿದ್ದೇವೆಂಬ ಆಧಾರದ ಮೇಲೆ ವಿವಾಹ ವಿಚ್ಛೇದನಕ್ಕೆ ದಾವೆಯನ್ನು ಹೂಡಬಹುದು:

ಪರಂತು, ವಿವಾಹದ ದಿನಾಂಕದಿಂದ ದಾವೆಯನ್ನು ಹೂಡುವ ದಿನಾಂಕದವರೆಗೆ ಒಂದು ವರ್ಷ ಕಳೆದಿದ್ದ ಹೊರತು, ಈ ಉಪಪ್ರಕರಣದ ಮೇರೆಗೆ ದಾವೆಯನ್ನು ಹೂಡತಕ್ಕದ್ದಲ್ಲ.

(2) ವಿವಾಹವು, ಈ ಅಧಿನಿಯಮದ ಮೇರೆಗೆ ವಿಧಿವತ್ತಾಗಿ ನಡೆದಿದೆಯೆಂದು ಮತ್ತು ವಾದಪತ್ರದಲ್ಲಿನ ಹೇಳಿಕೆಗಳು ಸತ್ಯವಾಗಿವೆಯೆಂದು ಮತ್ತು ದಾವೆಯ ಯಾರೇ ಪಕ್ಷಕಾರರಿಂದ ಸಮ್ಮತಿಯನ್ನು ಒತ್ತಾಯದಿಂದ ಅಥವಾ ಮೋಸದಿಂದ ಪಡೆದಿಲ್ಲವೆಂದು, ಪಕ್ಷಕಾರರ ಅಹವಾಲನ್ನು ಕೇಳಿದ ತರುವಾಯ ಮತ್ತು ಸೂಕ್ತವೆಂದು ತಾನು ಭಾವಿಸುವಂಥ ವಿಚಾರಣೆಯನ್ನು ನ್ಯಾಯಾಲಯವು ಮಾಡಿದ ತರುವಾಯ ಅದು, ಡಿಕ್ರಿಯ ದಿನಾಂಕದಿಂದ ಜಾರಿಗೆ ಬರುವಂತೆ ವಿವಾಹವು ವಿಘಟಿತವಾಗುವುದೆಂದು ಘೋಷಿಸಿ ಡಿಕ್ರಿಯನ್ನು ಹೊರಡಿಸತಕ್ಕದ್ದು.

**33. ಸಹ-ಪ್ರತಿವಾದಿಯನ್ನು ಸೇರಿಸಿಕೊಳ್ಳುವುದು.**- ಪರಸತಿ ಸಂಗದ ಕಾರಣದ ಮೇಲೆ ವಿವಾಹ ವಿಚ್ಛೇದನದ ಪ್ರತಿಯೊಂದು ದಾವೆಯಲ್ಲಿ, ನ್ಯಾಯಾಲಯವು ಇತರ ರೀತಿಯಲ್ಲಿ ಆದೇಶಿಸದ ಹೊರತು, ವಾದಿಯು ಪರಸತಿ ಸಂಗವನ್ನು ಮಾಡಲಾಗಿದೆ ಎಂದು ಆಪಾದಿಸಲಾದ ವ್ಯಕ್ತಿಯನ್ನು ಸಹ - ಪ್ರತಿವಾದಿಯನ್ನಾಗಿ ಮಾಡತಕ್ಕುದು ಮತ್ತು ಪತಿಯು ಹೂಡಿದ ಅಂಥ ಯಾವುದೇ ದಾವೆಯಲ್ಲಿ ವ್ಯವಹರಣೆಗಳ ಪೂರ್ಣ ವೆಚ್ಚವನ್ನು ಅಥವಾ ಅದರ ಯಾವುದೇ ಭಾಗವನ್ನು ಸಂದಾಯ ಮಾಡುವಂತೆ ನ್ಯಾಯಾಲಯವು ಪರಸತಿ ಸಂಗಿಗೆ ಆದೇಶಿಸಬಹುದು.

**34. ನ್ಯಾಯಿಕ ಪ್ರತ್ಯೇಕೀಕರಣಕ್ಕಾಗಿ ದಾವೆಗಳು.**- ಯಾರೇ ವಿವಾಹಿತ ವ್ಯಕ್ತಿಯು ವಿವಾಹ ವಿಚ್ಛೇದನಕ್ಕಾಗಿ ಯಾವ ಕಾರಣಗಳ ಮೇಲೆ ದಾವೆ ಹೂಡಬಹುದೋ ಆ ಯಾವುದೇ ಕಾರಣಗಳ ಮೇಲೆ ನ್ಯಾಯಿಕ ಪ್ರತ್ಯೇಕೀಕರಣಕ್ಕಾಗಿ ದಾವೆ ಹೂಡಬಹುದು.

**35. ಕೆಲವು ದಾವೆಗಳಲ್ಲಿ ಡಿಕ್ರಿಗಳು.**- 30, 31, 32, 32ಎ ಅಥವಾ 34ನೇ ಪ್ರಕರಣದ ಮೇರೆಗಿನ ಯಾವುದೇ ದಾವೆಯಲ್ಲಿ ಪ್ರತಿವಾದಿಸಿರಲಿ ಅಥವಾ ಇಲ್ಲದಿರಲಿ, ಪರಿಹಾರವನ್ನು ಮಂಜೂರು ಮಾಡುವುದಕ್ಕಾಗಿ ಆ ಪ್ರಕರಣಗಳಲ್ಲಿ ವಿವರಿಸಿರುವ ಯಾವುವೇ ಕಾರಣಗಳು ಅಸ್ತಿತ್ವದಲ್ಲಿರುವುದಾಗಿ ಅಥವಾ ಪರಿಹಾರವನ್ನು ತಡೆಹಿಡಿಯುವುದಕ್ಕಾಗಿ ಅದರಲ್ಲಿ ವಿವರಿಸಿರುವ ಯಾವುವೇ ಕಾರಣಗಳು ಅಸ್ತಿತ್ವದಲ್ಲಿ ಇಲ್ಲವೆಂಬುದಾಗಿ; ಮತ್ತು

(ಎ) ವಾದಪತ್ರದಲ್ಲಿ ವಿವರಿಸಿರುವ ಕೃತ್ಯ ಅಥವಾ ಕಾರ್ಯಲೋಪವನ್ನು ಕ್ಷಮಿಸಲಾಗಿಲ್ಲವೆಂದು;

(ಬಿ) ಗಂಡ ಅಥವಾ ಹೆಂಡತಿ ಒಟ್ಟಾಗಿ ಶಾಮೀಲಾಗಿಲ್ಲವೆಂದು;

(ಸಿ) ವಾದಿಯು ಸದರಿ ಕೃತ್ಯ ಅಥವಾ ಕಾರ್ಯಲೋಪಕ್ಕೆ ಪರೋಕ್ಷವಾಗಿ ಕಾರಣನಾಗಿಲ್ಲವೆಂದು ಅಥವಾ ಅದಕ್ಕೆ ಸಹಕರಿಸಿಲ್ಲವೆಂದು;

(ಡಿ) (ಈ ಅಧಿನಿಯಮದ ಮೂಲಕ ಕಾಲ ಪರಿಮಿತಿಯ ನಿರ್ದಿಷ್ಟ ಅವಧಿಯನ್ನು ಉಪಬಂಧಿಸಿರುವುದನ್ನು ಉಳಿದು) ದಾವೆಯನ್ನು ಹೂಡುವಲ್ಲಿ ಅನಾವಶ್ಯಕ ಅಥವಾ ಅನುಚಿತ ವಿಳಂಬವಾಗಿಲ್ಲವೆಂದು;

(ಇ) ಪರಿಹಾರವನ್ನು ಏಕೆ ನೀಡಬಾರದೆಂಬುದಕ್ಕೆ ಇತರೆ ಯಾವುದೇ ಕಾನೂನುಸಮ್ಮತ ಕಾರಣಗಳಿಲ್ಲವೆಂದು

– ನ್ಯಾಯಾಲಯಕ್ಕೆ ಮನದಟ್ಟಾದರೆ,

ಅನಂತರ ಮತ್ತು ಅಂಥ ಸಂದರ್ಭಗಳಲ್ಲಿ, ಆದರೆ ಇತರೆ ರೀತಿಯಲ್ಲಲ್ಲದೆ, ನ್ಯಾಯಾಲಯವು ತದನುಸಾರವಾಗಿ ಅಂಥ ಪರಿಹಾರಕ್ಕಾಗಿ ಡಿಕ್ರಿ ಹೊರಡಿಸತಕ್ಕದ್ದು.

**36. ದಾಂಪತ್ಯ ಅಧಿಕಾರಗಳ ಪುನಃ ಸ್ಥಾಪನೆಗೆ ದಾವೆ.**– ಗಂಡನು ತನ್ನ ಹೆಂಡತಿಯನ್ನು ಪರಿತ್ಯಜಿಸಿರುವಲ್ಲಿ ಅಥವಾ ಕಾನೂನುಬದ್ಧ ಕಾರಣವಿಲ್ಲದೇ ಅವನು ಹೆಂಡತಿಯೊಂದಿಗೆ ಸಂಸಾರ ಮಾಡುವುದನ್ನು ನಿಲ್ಲಿಸಿರುವಲ್ಲಿ ಅಥವಾ ಹೆಂಡತಿಯು ತನ್ನ ಗಂಡನನ್ನು ಪರಿತ್ಯಜಿಸಿರುವಲ್ಲಿ ಅಥವಾ ಕಾನೂನುಬದ್ಧ ಕಾರಣವಿಲ್ಲದೆ ಅವಳು ಗಂಡನೊಂದಿಗೆ ಸಂಸಾರ ಮಾಡುವುದನ್ನು ನಿಲ್ಲಿಸಿರುವಲ್ಲಿ ಹಾಗೆ ಪರಿತ್ಯಜಿಸಿದ ಪಕ್ಷಕಾರ ಅಥವಾ ಯಾರೊಂದಿಗೆ ಅಂಥ ಸಂಸಾರ ನಿಂತುಹೋಗಿದೆಯೋ ಅವನ ಅಥವಾ ಅವಳ ದಾಂಪತ್ಯ ಅಧಿಕಾರಗಳ ಪುನಃ ಸ್ಥಾಪನೆಗೆ ದಾವೆ ಹೂಡಬಹುದು ಮತ್ತು ವಾದಪತ್ರದಲ್ಲಿ ಒಳಗೊಂಡಿರುವ ಆಪಾದನೆಗಳ ಸತ್ಯತೆಯ ಬಗ್ಗೆ ಮತ್ತು ಪರಿಹಾರವನ್ನು ಏಕೆ ನೀಡಬಾರದೆಂಬ ಬಗ್ಗೆ ನ್ಯಾಯವಾದ ಕಾರಣವಿಲ್ಲವೆಂದು ನ್ಯಾಯಾಲಯಕ್ಕೆ ಮನದಟ್ಟಾದರೆ ಅದಕ್ಕನುಸಾರವಾಗಿ ಅಂಥ ದಾಂಪತ್ಯ ಅಧಿಕಾರಗಳ ಪುನಃ ಸ್ಥಾಪನೆಗೆ ಡಿಕ್ರಿ ನೀಡಲು ಕ್ರಮ ಕೈಗೊಳ್ಳಬಹುದು.

**37. ಯಾವುದೇ ಪರಿಹಾರಕ್ಕಾಗಿ ಪ್ರತಿವಾದಿಯ ಪ್ರತಿ ಕ್ಲೇಮು.**– ಈ ಅಧಿನಿಯಮದ ಮೇರೆಗಿನ ಯಾವುದೇ ದಾವೆಯಲ್ಲಿ, ಪ್ರತಿವಾದಿಯು ಈ ಅಧಿನಿಯಮದ ಮೇರೆಗೆ ಅವನು ಅಥವಾ ಅವಳು ಪಡೆಯಲು ಹಕ್ಕುಳ್ಳ ಯಾವುದೇ ಪರಿಹಾರಕ್ಕಾಗಿ ಪ್ರತಿ ಕ್ಲೇಮು ಸಲ್ಲಿಸಬಹುದು.

**38. ದಸ್ತಾವೇಜೀಯ ಸಾಕ್ಷ್ಯ.**– ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಯಾವ ದಸ್ತಾವೇಜೂ, ಅದಕ್ಕೆ ಕ್ರಮಬದ್ಧವಾಗಿ ಸ್ಟಾಂಪು ಹಚ್ಚಿಲ್ಲ ಅಥವಾ ಅದು ನೋಂದಣಿ ಆಗಿಲ್ಲವೆಂಬ ಕಾರಣದ ಮೇಲೆ, ಈ ಅಧಿನಿಯಮದ ಮೇರೆಗಿನ ದಾವೆಯ ಅಧಿವಿಚಾರಣೆಯಲ್ಲಿನ ಯಾವುದೇ ವ್ಯವಹರಣೆಯಲ್ಲಿನ ಸಾಕ್ಷ್ಯದಲ್ಲಿ ಅನಂಗೀಕಾರಾರ್ಹವಾಗತಕ್ಕದ್ದಲ್ಲ.

**39. ವ್ಯಾಜ್ಯಕಾಲೀನ ನಿರ್ವಹಣಾ ವೆಚ್ಚ.**– ಈ ಅಧಿನಿಯಮದ ಮೇರೆಗೆ ಯಾವುದೇ ದಾವೆಯಲ್ಲಿ, ಸಂದರ್ಭಾನುಸಾರ, ಹೆಂಡತಿ ಅಥವಾ ಗಂಡ ಇಬ್ಬರಲ್ಲಿ ಒಬ್ಬರಿಗೆ ಅವಳ ಅಥವಾ ಅವನ ಪೋಷಣೆಗಾಗಿ ಮತ್ತು ದಾವೆಯ ಅವಶ್ಯಕ ವೆಚ್ಚಗಳಿಗಾಗಿ ಯಾವ ಸಾಕಷ್ಟು ಸ್ವಂತ ಆದಾಯವೂ ಇಲ್ಲವೆಂದು ನ್ಯಾಯಾಲಯಕ್ಕೆ ಕಂಡುಬಂದಲ್ಲಿ, ಅದು ಹೆಂಡತಿಯ ಅಥವಾ ಗಂಡನ ಅರ್ಜಿಯ ಮೇಲೆ, ವಾದಿಯ ಸ್ವಂತ ಆದಾಯವನ್ನು ಮತ್ತು ಪ್ರತಿವಾದಿಯ ಆದಾಯವನ್ನು ಗಮನಿಸಿ, ದಾವೆಯ ವೆಚ್ಚಗಳನ್ನು ಮತ್ತು ನ್ಯಾಯಾಲಯವು ಯುಕ್ತವೆಂದು ಭಾವಿಸಬಹುದಾದಂಥ ವಾರದ ಮತ್ತು ಮಾಸಿಕ ಮೊತ್ತವನ್ನು ದಾವೆಯ ಅವಧಿಯಲ್ಲಿ ವಾದಿಗೆ ಸಂದಾಯ ಮಾಡುವಂತೆ ಪ್ರತಿವಾದಿಗೆ ಆದೇಶಿಸಬಹುದು:

ಪರಂತು, ದಾವೆಯ ವೆಚ್ಚಗಳ ಮತ್ತು ವಾರದ ಮತ್ತು ಮಾಸಿಕ ಮೊತ್ತದ ಸಂದಾಯಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ಸಾಧ್ಯವಾದಷ್ಟು ಬೇಗನೆ, ಸಂದರ್ಭಾನುಸಾರ ಹೆಂಡತಿ ಅಥವಾ ಗಂಡನಿಗೆ ನೋಟೀಸನ್ನು ಜಾರಿಮಾಡಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ವಿಲೆ ಮಾಡತಕ್ಕದ್ದು.

**40. ಶಾಶ್ವತ ನಿರ್ವಹಣಾ ವೆಚ್ಚ ಮತ್ತು ಜೀವನಾಂಶ.**– (1) ಈ ಅಧಿನಿಯಮದ ಮೇರೆಗೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿರುವ ಯಾವುದೇ ನ್ಯಾಯಾಲಯವು, ಯಾವುದೇ ಡಿಕ್ರಿಯನ್ನು ಹೊರಡಿಸುವ ಸಮಯದಲ್ಲಿ ಅಥವಾ ಆ ತರುವಾಯದ ಯಾವುದೇ ಸಮಯದಲ್ಲಿ, ಆ ಉದ್ದೇಶಕ್ಕಾಗಿ ಗಂಡನಾಗಲಿ ಅಥವಾ ಹೆಂಡತಿಯಾಗಲಿ ಮಾಡಿಕೊಂಡ ಅರ್ಜಿಯ ಮೇಲೆ, ಪ್ರತಿವಾದಿಯ ಸ್ವಂತ ಆದಾಯ ಮತ್ತು ಇತರೆ

ಆಸ್ತಿಪಾಸ್ತಿ, ಯಾವುದಾದರೂ ಇದ್ದರೆ ಅದನ್ನು, ವಾದಿಯ ಆದಾಯ ಮತ್ತು ಇತರೆ ಆಸ್ತಿಪಾಸ್ತಿಯನ್ನು, ಪಕ್ಷಕಾರರ ನಡತೆಯನ್ನು ಮತ್ತು ಮೊಕದ್ದಮೆಯ ಇತರ ಸನ್ನಿವೇಶಗಳನ್ನು ಗಮನಿಸಿ, ಆಕೆಯ ಅಥವಾ ಆತನ ಜೀವನಾಂಶಕ್ಕೆ ಮತ್ತು ಪೋಷಣೆಗಾಗಿ ನ್ಯಾಯಾಲಯವು ನ್ಯಾಯೋಚಿತವೆಂದು ಭಾವಿಸಬಹುದಾದಂಥ ಒಟ್ಟು ಮೊತ್ತವನ್ನು ಅಥವಾ ಅಂಥ ಮಾಸಿಕ ಅಥವಾ ನಿಯತಕಾಲಿಕ ಮೊತ್ತವನ್ನು, ವಾದಿಯ ಜೀವಿತಕಾಲವು ಮೀರದ ಅವಧಿಯವರೆಗೆ, ಪ್ರತಿವಾದಿಯು ವಾದಿಗೆ ಸಂದಾಯ ಮಾಡತಕ್ಕದ್ದೆಂದು ಆದೇಶಿಸಬಹುದು ಮತ್ತು ಯಾವುದೇ ಅಂಥ ಸಂದಾಯವನ್ನು, ಅಗತ್ಯಬಿದ್ದರೆ, ಪ್ರತಿವಾದಿಯ ಚರ ಅಥವಾ ಸ್ಥಿರ ಸ್ವತ್ತಿನ ಮೇಲೆ ಹೊಣೆಹೊರಿಸಿ ಪಡೆದುಕೊಳ್ಳಬಹುದು.

(2) ನ್ಯಾಯಾಲಯವು, (1)ನೇ ಉಪ-ಪ್ರಕರಣದ ಮೇರೆಗೆ ಆದೇಶವನ್ನು ಹೊರಡಿಸಿದ ತರುವಾಯ, ಯಾವುದೇ ಕಾಲದಲ್ಲಿ ಪಕ್ಷಕಾರರಲ್ಲೊಬ್ಬರ ಪರಿಸ್ಥಿತಿಗಳಲ್ಲಿ ಬದಲಾವಣೆ ಉಂಟಾಗಿದೆ ಎಂದು ಮನಗಂಡರೆ, ಪಕ್ಷಕಾರರಲ್ಲಿ ಯಾರೇ ಒಬ್ಬರ ಕೋರಿಕೆಯ ಮೇರೆಗೆ ನ್ಯಾಯಾಲಯವು ನ್ಯಾಯ ಸಮ್ಮತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಅಂಥ ಆದೇಶವನ್ನು ಬದಲಾಯಿಸಬಹುದು, ಮಾರ್ಪಡಿಸಬಹುದು ಅಥವಾ ರದ್ದುಗೊಳಿಸಬಹುದು.

(3) ಈ ಅಧಿನಿಯಮದ ಮೇರೆಗೆ ಯಾವ ಪಕ್ಷಕಾರನ ಪರವಾಗಿ ಆದೇಶವನ್ನು ಮಾಡಲಾಗಿದೆಯೋ ಆ ಪಕ್ಷಕಾರನು, ಪುನಃ ವಿವಾಹವಾಗಿದ್ದಾನೆಂದು ಅಥವಾ ಅಂಥ ಪಕ್ಷಕಾರನು ಹೆಂಡತಿ ಆಗಿದ್ದರೆ, ಅವಳು ಶೀಲವಂತೆಯಾಗಿ ಉಳಿದಿಲ್ಲವೆಂದು, ಅಥವಾ ಅಂಥ ಪಕ್ಷಕಾರನ ಗಂಡನಾಗಿದ್ದರೆ, ಅವನು ಯಾವುದೇ ಹೆಂಗಸಿನೊಂದಿಗೆ ವಿವಾಹಬಾಹಿರ ಲೈಂಗಿಕ ಸಂಬಂಧ ಹೊಂದಿದ್ದಾನೆಂದು ನ್ಯಾಯಾಲಯವು ಮನಗಂಡರೆ, ಇನ್ನೊಬ್ಬ ಪಕ್ಷಕಾರನ ಕೋರಿಕೆಯ ಮೇರೆಗೆ, ನ್ಯಾಯಾಲಯವು, ತಾನು ನ್ಯಾಯ ಸಮ್ಮತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಯಾವುದೇ ಅಂಥ ಆದೇಶವನ್ನು ಬದಲಾಯಿಸಬಹುದು, ಮಾರ್ಪಡಿಸಬಹುದು ಅಥವಾ ರದ್ದುಗೊಳಿಸಬಹುದು.

**41. ಹೆಂಡತಿಗೆ ಅಥವಾ ಅವಳ ನ್ಯಾಸಧಾರಿಗೆ ನಿರ್ವಹಣಾ ವೆಚ್ಚವನ್ನು ಸಂದಾಯ ಮಾಡುವುದು.-** ನ್ಯಾಯಾಲಯವು ನಿರ್ವಹಣಾ ವೆಚ್ಚಕ್ಕಾಗಿ ಯಾವುದೇ ಡಿಕ್ರಿ ಅಥವಾ ಆದೇಶ ಮಾಡಿರುವ ಎಲ್ಲ ಸಂದರ್ಭಗಳಲ್ಲಿ ಅದನ್ನು ಹೆಂಡತಿಗೆ ಅಥವಾ ಅವಳ ಪರವಾಗಿ ನ್ಯಾಯಾಲಯದಿಂದ ಅನುಮೋದನೆಗೊಂಡಿರುವ ಯಾರೇ ನ್ಯಾಸಧಾರಿಗೆ ಅಥವಾ ನ್ಯಾಯಾಲಯವು ನೇಮಿಸಿರುವ ಪಾಲಕನಿಗೆ ಸಂದಾಯ ಮಾಡಲು ನಿರ್ದೇಶಿಸಬಹುದು, ಮತ್ತು ನ್ಯಾಯಾಲಯವು ವಿಹಿತವೆಂದು ಭಾವಿಸುವ ಯಾವುವೇ ನಿಬಂಧನೆ ಅಥವಾ ನಿರ್ಬಂಧಗಳನ್ನು ವಿಧಿಸಬಹುದು ಮತ್ತು ಯಾವುದೇ ಕಾರಣಕ್ಕಾಗಿ ಒಬ್ಬ ಹೊಸ ನ್ಯಾಸಧಾರಿಯನ್ನು ಅಥವಾ ಪಾಲಕನನ್ನು ಕಾಲಕಾಲಕ್ಕೆ ನೇಮಕ ಮಾಡುವುದು ಉಚಿತವೆಂದು ನ್ಯಾಯಾಲಯಕ್ಕೆ ಕಂಡುಬಂದರೆ ಹಾಗೆ ನೇಮಕ ಮಾಡಬಹುದು.

**42. ಜಂಟಿ ಸ್ವತ್ತಿನ ವಿಲೆ.-** ವಿವಾಹದ ಸಮಯದಲ್ಲಿ ಅಥವಾ ಅದರ ಆಸುಪಾಸಿನಲ್ಲಿ ನೀಡಿದ ಮತ್ತು ಗಂಡ ಮತ್ತು ಹೆಂಡತಿ ಇಬ್ಬರಿಗೂ ಜಂಟಿಯಾಗಿ ಸೇರಿರಬಹುದಾದಂಥ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗಿನ ಯಾವುದೇ ದಾವೆಯಲ್ಲಿ ನ್ಯಾಯಾಲಯವು ತಾನು ನ್ಯಾಯಸಮ್ಮತವೆಂದು ಅಥವಾ ಸರಿಯೆಂದು ಭಾವಿಸಬಹುದಾದ ರೀತಿಯಲ್ಲಿ ಅಂತಿಮ ಡಿಕ್ರಿಯಲ್ಲಿ ಉಪಬಂಧಗಳನ್ನು ಮಾಡಬಹುದು.

**43. ದಾವೆಗಳನ್ನು ರಹಸ್ಯವಾಗಿ ವಿಚಾರಣೆ ಮಾಡುವುದು ಮತ್ತು ಮುದ್ರಿಸದಿರುವುದು ಅಥವಾ ಪ್ರಕಟಿಸದಿರುವುದು.-** (1) ಈ ಅಧಿನಿಯಮದ ಮೇರೆಗೆ ಹೂಡಿದ ಪ್ರತಿಯೊಂದು ದಾವೆಯ ಅಧಿವಿಚಾರಣೆಯನ್ನು ರಹಸ್ಯವಾಗಿ ನಡೆಸತಕ್ಕದ್ದು ಮತ್ತು ನ್ಯಾಯಾಲಯದ ಪೂರ್ವ ಅನುಮತಿಯಿಂದ ಮುದ್ರಿಸಿದ ಅಥವಾ ಪ್ರಕಟಿಸಿದ ನ್ಯಾಯಾಲಯದ ತೀರ್ಪಿನ ಹೊರತು, ಯಾವುದೇ ಅಂಥ ಮೊಕದ್ದಮೆಗೆ ಸಂಬಂಧಿಸಿದಂತೆ ಯಾವುದೇ ವಿಷಯವನ್ನು ಮುದ್ರಿಸುವುದು ಅಥವಾ ಪ್ರಕಟಿಸುವುದು ಯಾವುದೇ ವ್ಯಕ್ತಿಗೆ ಕಾನೂನುಸಮ್ಮತವಾಗತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿರುವ ಉಪಬಂಧಗಳನ್ನು ಉಲ್ಲಂಘಿಸಿ ಯಾರೇ ವ್ಯಕ್ತಿಯು ಯಾವುದೇ ವಿಷಯವನ್ನು ಮುದ್ರಿಸಿದರೆ ಅಥವಾ ಪ್ರಕಟಿಸಿದರೆ, ಅವನು ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

**44. ಅಧಿವಿಚಾರಣೆಯ ಮಾನ್ಯತೆ.**– 19 ಅಥವಾ 20ನೇ ಪ್ರಕರಣಗಳಲ್ಲಿ ಏನೇ ಇದ್ದರೂ, ಪಾರ್ಸಿ ವೈವಾಹಿಕ ನ್ಯಾಯಾಲಯದಲ್ಲಿ ಅಧಿವಿಚಾರಣೆಯಾಗುವ ವ್ಯವಹರಣೆಯ ಉದ್ದಕ್ಕೂ ಮೂರಕ್ಕೆ ಕಡಿಮೆ ಇಲ್ಲದಷ್ಟು ಪ್ರತಿನಿಧಿಗಳು ಹಾಜರಾಗಿರುವ ಸಂದರ್ಭದಲ್ಲಿ ಇತರ ಪ್ರತಿನಿಧಿಗಳು ಅದರ ಯಾವುದೇ ಭಾಗದ ಅವಧಿಯಲ್ಲಿ ಗೈರುಹಾಜರಾಗಿದ್ದರೆಂಬ ಕಾರಣಕ್ಕಾಗಿ ಅಧಿವಿಚಾರಣೆಯನ್ನು ಅಮಾನ್ಯಗೊಳಿಸತಕ್ಕದ್ದಲ್ಲ.

**45. ಈ ಅಧಿನಿಯಮದ ಮೇರೆಗಿನ ದಾವೆಗಳಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಉಪಬಂಧಗಳ ಅನ್ವಯ.**– ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಉಪಬಂಧಗಳನ್ನು, ಅವುಗಳು ಅನ್ವಯವಾಗಬಹುದಾದಷ್ಟರ ಮಟ್ಟಿಗೆ ಡಿಕ್ರಿಯ ತರುವಾಯದ ಜಾರಿಯಲ್ಲಿರುವ ವ್ಯವಹರಣೆಗಳು ಮತ್ತು ಆದೇಶಗಳೂ ಸೇರಿದಂತೆ ಈ ಅಧಿನಿಯಮದ ಮೇರೆಗೆ ಹೂಡಲಾದ ದಾವೆಗಳಲ್ಲಿನ ವ್ಯವಹರಣೆಗಳಿಗೆ ಅನ್ವಯವಾಗತಕ್ಕದ್ದು:

ಪರಂತು, ಈ ಅಧಿನಿಯಮಕ್ಕೆ ಸಂಬಂಧಪಟ್ಟ ಪ್ರಕರಣಗಳನ್ನು ಪ್ರಿಸೈಡಿಂಗ್ ನ್ಯಾಯಾಧೀಶನು ಪ್ರತಿನಿಧಿಗಳಿಗೆ ಓದಿ ಹೇಳತಕ್ಕದ್ದು ಮತ್ತು ಅದನ್ನು ವಿವರಿಸುವುದು ಅಗತ್ಯವೆಂದು ಅವನಿಗೆ ಅನ್ನಿಸಿದರೆ, ಹಾಗೆ ಮಾಡಬಹುದು:

ಮತ್ತೂ ಪರಂತು, ಪ್ರಿಸೈಡಿಂಗ್ ನ್ಯಾಯಾಧೀಶನು ಪ್ರತಿನಿಧಿಗಳಿಗೆ ಓದಿ ಹೇಳಿದ್ದನ್ನು ಅಥವಾ ವಿವರಿಸಿದ್ದನ್ನು ಪದಶಃ ದಾಖಲೆ ಮಾಡತಕ್ಕದ್ದು.

**46. ಕಾನೂನು, ಪ್ರಕ್ರಿಯೆ ಮತ್ತು ಸಂಗತಿಯ ಪ್ರಶ್ನೆಗಳ ನಿರ್ಧರಣೆ.**– ಈ ಅಧಿನಿಯಮದ ಮೇರೆಗಿನ ದಾವೆಗಳಲ್ಲಿನ ಎಲ್ಲ ಕಾನೂನು ಮತ್ತು ಪ್ರಕ್ರಿಯೆಗಳ ಎಲ್ಲ ಪ್ರಶ್ನೆಗಳನ್ನು ಪ್ರಿಸೈಡಿಂಗ್ ನ್ಯಾಯಾಧೀಶನು ನಿರ್ಧರಿಸತಕ್ಕದ್ದು; ಆದರೆ ಸಂಗತಿಗಳ ಮೇಲಿನ ತೀರ್ಮಾನವು ಯಾವ ಪ್ರತಿನಿಧಿಗಳ ಸಮ್ಮುಖದಲ್ಲಿ ವಿಚಾರಣೆ ನಡೆಯಿತೋ ಅಂಥ ಬಹುಸಂಖ್ಯೆಯ ಪ್ರತಿನಿಧಿಗಳ ತೀರ್ಮಾನವಾಗಿರತಕ್ಕದ್ದು:

ಪರಂತು, ಅಭಿಪ್ರಾಯ ನೀಡುವಲ್ಲಿ ಪ್ರತಿನಿಧಿಗಳು ಸಮಸಂಖ್ಯೆಯಲ್ಲಿ ಅಭಿಪ್ರಾಯ ಭೇದ ಹೊಂದಿರುವಲ್ಲಿ, ಸಂಗತಿಗಳ ಮೇಲೆ ಪ್ರಿಸೈಡಿಂಗ್ ನ್ಯಾಯಾಧೀಶನು ನೀಡುವ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**47. ಉಚ್ಚ ನ್ಯಾಯಾಲಯಕ್ಕೆ ಅಪೀಲು.**– (1) ಉಚ್ಚ ನ್ಯಾಯಾಲಯಕ್ಕೆ,–

(ಎ) ಈ ಅಧಿನಿಯಮದ ಮೇರೆಗೆ ಸ್ಥಾಪಿಸಲಾದ ಯಾವುದೇ ನ್ಯಾಯಾಲಯವು ಮುಖ್ಯ ವೈವಾಹಿಕ ನ್ಯಾಯಾಲಯವಾಗಿರಲಿ ಅಥವಾ ಜಿಲ್ಲಾ ವೈವಾಹಿಕ ನ್ಯಾಯಾಲಯವಾಗಿರಲಿ, ಆ ನ್ಯಾಯಾಲಯದ ತೀರ್ಮಾನವು ಕೆಲವು ಕಾನೂನುಗಳಿಗೆ ಅಥವಾ ಕಾನೂನು ಬಲ ಹೊಂದಿರುವ ಆಚರಣೆಗೆ ವಿರುದ್ಧವಾಗಿದೆ ಎಂಬ ಕಾರಣದ ಮೇಲೆ, ಅಥವಾ ಮೊಕದ್ದಮೆಯ ಪ್ರಕ್ರಿಯೆಯಲ್ಲಿನ ಅಥವಾ ತನಿಖೆಯಲ್ಲಿನ ಗಣನೀಯ ತಪ್ಪಿನಿಂದ ಅಥವಾ ದೋಷದಿಂದ ಮೊಕದ್ದಮೆಯ ತೀರ್ಮಾನದಲ್ಲಿ ಗುಣಾವಗುಣಗಳ ಮೇಲೆ ತಪ್ಪನ್ನು ಅಥವಾ ದೋಷವನ್ನು ಉಂಟು ಮಾಡಿರಬಹುದಾದ ಕಾರಣದ ಮೇಲೆ ತೀರ್ಮಾನದ ವಿರುದ್ಧ ಅಪೀಲನ್ನು ಸಲ್ಲಿಸಲು ಅವಕಾಶವಿರತಕ್ಕದ್ದೇ ಹೊರತು ಇತರ ಕಾರಣಗಳ ಮೇಲೆ ಅಲ್ಲ; ಮತ್ತು

(ಬಿ) 29ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಅಂಥ ಯಾವುದೇ ನ್ಯಾಯಾಲಯವು ನೀಡಿದ ಅನುಮತಿಯ ಮೇಲೆ

– ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು:

ಪರಂತು, ಯಾವ ತೀರ್ಮಾನದ ವಿರುದ್ಧ ಅಪೀಲು ಸಲ್ಲಿಸಬೇಕಾಗಿದೆಯೋ, ಆ ತೀರ್ಮಾನವನ್ನು ಘೋಷಿಸಿದ ದಿನಾಂಕದಿಂದ ಮೂರು ಕ್ಯಾಲೆಂಡರ್ ತಿಂಗಳೊಳಗಾಗಿ ಅಂಥ ಅಪೀಲನ್ನು ಸಲ್ಲಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು ಉಚ್ಚ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರ ಪೀಠವು ವಿಚಾರಣೆ ಮಾಡತಕ್ಕದ್ದು.

**48. ಪುನಃ ವಿವಾಹವಾಗಲು ಪಕ್ಷಕಾರರಿಗೆ ಸ್ವಾತಂತ್ರ್ಯ.**– ವಿವಾಹ ವಿಚ್ಛೇದನಕ್ಕೆ ಅನುಮತಿ ನೀಡುವ ಅಥವಾ ವಿವಾಹವನ್ನು ರದ್ದುಗೊಳಿಸುವ ಅಥವಾ ವಿಘಟಿಸುವ ಯಾವುದೇ ಡಿಕ್ರಿಯ ವಿರುದ್ಧ ಅಪೀಲು ಸಲ್ಲಿಸಲು ಸೀಮಿತಗೊಳಿಸಿದ್ದ ಸಮಯವು ಮುಕ್ತಾಯವಾದಾಗ ಮತ್ತು ಅಂಥ ಡಿಕ್ರಿಯ ವಿರುದ್ಧ ಯಾವುದೇ

ಅಪೀಲು ಸಲ್ಲಿಸದಿದ್ದಾಗ ಅಥವಾ ಅಂಥ ಯಾವುದೇ ಅಪೀಲನ್ನು ವಜಾ ಮಾಡಿದ್ದಾಗ, ಅಥವಾ ಯಾವುದೇ ಅಪೀಲಿನ ಪರಿಣಾಮವಾಗಿ ವಿವಾಹ ವಿಚ್ಛೇದನಕ್ಕೆ ಅನುಮತಿ ನೀಡಿದಾಗ ಅಥವಾ ಅಂಥ ವಿವಾಹವು ರದ್ದುಗೊಂಡಿದೆ ಅಥವಾ ಅದನ್ನು ವಿಘಟಿಸಲಾಗಿದೆ ಎಂದು ಘೋಷಿಸಿದಾಗ, ಆದರೆ ಬಹುಬೇಗನೆ ಅಲ್ಲದಿದ್ದರೂ, ಆಯಾ ಪಕ್ಷಕಾರರು ಪುನಃ ವಿವಾಹವಾಗುವುದು ಕಾನೂನುಸಮ್ಮತವಾದುದಾಗಿರತಕ್ಕದ್ದು.

## V- ಪಕ್ಷಕಾರರ ಮಕ್ಕಳು

**49. ಮಕ್ಕಳ ಅಭಿರಕ್ಷೆ.-** ಈ ಅಧಿನಿಯಮದ ಮೇರೆಗಿನ ಯಾವುದೇ ದಾವೆಯಲ್ಲಿ, ನ್ಯಾಯಾಲಯವು ಕಾಲಕಾಲಕ್ಕೆ ಯಾವ ಮಕ್ಕಳ ತಂದೆತಾಯಿಯ ವಿವಾಹವು ಅಂಥ ದಾವೆಗೆ ಒಳಪಟ್ಟಿರುವುದೋ, ಅಂಥ ಹದಿನೆಂಟು ವರ್ಷ ವಯಸ್ಸಿನೊಳಗಿನ ಮಕ್ಕಳ ಅಭಿರಕ್ಷೆ, ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಂತಿಮ ಡಿಕ್ರಿಯಲ್ಲಿ ನ್ಯಾಯೋಚಿತವೆಂದು ಮತ್ತು ಸರಿಯಾದುದೆಂದು ಭಾವಿಸಬಹುದಾದಂಥ ರೀತಿಯಲ್ಲಿ ಮಧ್ಯಂತರ ಆದೇಶಗಳನ್ನು ಹೊರಡಿಸಬಹುದು ಮತ್ತು ಅಂಥ ಉಪಬಂಧಗಳನ್ನು ಕಲ್ಪಿಸಬಹುದು, ಅಂತಿಮ ಡಿಕ್ರಿಯಾದ ನಂತರ, ಈ ಉದ್ದೇಶಕ್ಕಾಗಿ ಅರ್ಜಿಯ ಮೂಲಕ ಅಂಥ ಡಿಕ್ರಿ ಪಡೆಯುವುದಕ್ಕಾಗಿ ದಾವೆಯು ಇನ್ನೂ ಬಾಕಿ ಇದ್ದ ಸಂದರ್ಭದಲ್ಲಿ ಅಂಥ ಅಂತಿಮ ಡಿಕ್ರಿ ಮೂಲಕ ಅಥವಾ ಮಧ್ಯಂತರ ಆದೇಶಗಳ ಮೂಲಕ ಮಾಡಲಾಗಿರುವ ಹಾಗೆಯೇ ಅಂಥ ಮಕ್ಕಳ ಅಭಿರಕ್ಷೆ, ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಂಥ ಎಲ್ಲ ಆದೇಶಗಳನ್ನು ಮತ್ತು ಉಪಬಂಧಗಳನ್ನು ಕಾಲಕಾಲಕ್ಕೆ ಮಾಡಬಹುದು, ರದ್ದುಗೊಳಿಸಬಹುದು, ತಡೆಹಿಡಿಯಬಹುದು ಅಥವಾ ವ್ಯತ್ಯಾಸಗೊಳಿಸಬಹುದು:

ಪರಂತು, ದಾವೆಯ ಅವಧಿಯಲ್ಲಿ ಅಂಥ ಮಕ್ಕಳ ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟ ಅರ್ಜಿಯನ್ನು, ಸಾಧ್ಯವಾದಷ್ಟು ಬೇಗನೇ ಪ್ರತಿವಾದಿಗೆ ನೋಟೀಸನ್ನು ಜಾರಿಮಾಡಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ವಿಲೆ ಮಾಡತಕ್ಕದ್ದು.

**50. ಮಕ್ಕಳ ಪ್ರಯೋಜನಕ್ಕಾಗಿ ಹೆಂಡತಿಯ ಸ್ವತ್ತಿನ ಇತ್ಯರ್ಥ.-** ನ್ಯಾಯಾಲಯವು ವಿವಾಹ ವಿಚ್ಛೇದನದ ಡಿಕ್ರಿಯ ಅಥವಾ ಪರಸತಿ ಸಂಗಕ್ಕಾಗಿ ನ್ಯಾಯಿಕ ಪ್ರತ್ಯೇಕತೆಯನ್ನು ಘೋಷಿಸಿರುವ ಯಾವುದೇ ಸಂದರ್ಭದಲ್ಲಿ, ಹೆಂಡತಿಯು ಯಾವುದೇ ಸ್ವತ್ತಿನ ಸ್ವಾಧೀನತೆಗೆ ಅಥವಾ ಹಿಂತೆಗೆದುಕೊಳ್ಳುವಿಕೆಗೆ ಹಕ್ಕುದಾರಳಾಗಿದ್ದಾಳೆಂದು ನ್ಯಾಯಾಲಯಕ್ಕೆ ಕಂಡುಬರುವ ಹಾಗೆ ಮಾಡಿದರೆ, ನ್ಯಾಯಾಲಯವು, ಅಂಥ ವಿವಾಹದಿಂದಾದ ಮಕ್ಕಳ ಅಥವಾ ಅವರಲ್ಲಿ ಯಾರಾದರೊಬ್ಬರ ಪ್ರಯೋಜನಕ್ಕಾಗಿ ಅಂಥ ಸ್ವತ್ತಿನ ಅರ್ಧದಷ್ಟನ್ನು ಮೀರದಂತೆ ಅದರ ಯಾವುದೇ ಭಾಗವನ್ನು ತಾನು ಯುಕ್ತವೆಂದು ಭಾವಿಸುವ ರೀತಿಯಲ್ಲಿ ಇತ್ಯರ್ಥಕ್ಕೆ ಆದೇಶಿಸಬಹುದು.

## VI - ಸಂಕೀರ್ಣ

**51. ಉಚ್ಚ ನ್ಯಾಯಾಲಯದ ಅಧೀಕ್ಷಣೆ.-** ಉಚ್ಚ ನ್ಯಾಯಾಲಯವು, ಸಂವಿಧಾನದ 227ನೇ ಅನುಚ್ಛೇದದ ಮೇರೆಗೆ ಮತ್ತು ಆ ಅನುಚ್ಛೇದದ ಎಲ್ಲ ಉಪಬಂಧಗಳು ಅಂಥ ನ್ಯಾಯಾಲಯಗಳಿಗೆ ಅನ್ವಯವಾಗುವ ರೀತಿಯಲ್ಲಿಯೇ ತನ್ನ ಅಪೀಲು ಅಧಿಕಾರದ ವ್ಯಾಪ್ತಿಗೊಳಪಟ್ಟು ಈ ಅಧಿನಿಯಮದ ಮೇರೆಗೆ ರಚಿಸಲಾದ ಎಲ್ಲ ನ್ಯಾಯಾಲಯಗಳ ಮೇಲೆ ತನ್ನ ಅಧೀಕ್ಷಣೆಯನ್ನು ಹೊಂದಿರತಕ್ಕದ್ದು.

**52. ಅಧಿನಿಯಮದ ಉಪಬಂಧಗಳ ಅನ್ವಯ.-** (1) ಈ ಅಧಿನಿಯಮದ ಉಪಬಂಧಗಳನ್ನು ಅವಲಂಬಿಸಿದ ಸನ್ನಿವೇಶಗಳು, ಈ ಅಧಿನಿಯಮವನ್ನು ಅನುಮೋದಿಸುವುದಕ್ಕೆ ಮುಂಚೆಯಾಗಲಿ ಅಥವಾ ನಂತರವಾಗಲಿ ಉಂಟಾಗಿರುವಲ್ಲಿ ಮತ್ತು ಉಲ್ಲೇಖಿಸಲಾದ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಈ ಅಧಿನಿಯಮದ ಮೇರೆಗೆ ಅಥವಾ ಈ ಅಧಿನಿಯಮವನ್ನು ಅನುಮೋದಿಸುವ ಮುಂಚೆ ಜಾರಿಯಲ್ಲಿದ್ದ ಕಾನೂನಿನ ಮೇರೆಗೆ ಹೊರಡಿಸಿರುವಲ್ಲಿ ಅವು ಎಲ್ಲ ದಾವೆಗಳಿಗೆ ಅನ್ವಯವಾಗತಕ್ಕದ್ದು ಮತ್ತು ಈ ಅಧಿನಿಯಮ ಪ್ರಾರಂಭವಾಗುವ ಸಮಯದಲ್ಲಿ ಯಾವುದೇ ನ್ಯಾಯಾಲಯದಲ್ಲಿ ಯಾವುವೇ ವ್ಯವಹರಣೆಗಳು ಬಾಕಿ ಇರುವಲ್ಲಿ ನ್ಯಾಯಾಲಯವು, ಈ ಅಧಿನಿಯಮವು ಕಾರ್ಯಾಚರಣೆಗೆ ಬಂದ ಪರಿಣಾಮವಾಗಿ ಅವಶ್ಯವಿರಬಹುದಾದಂಥ ವಾದ ಪ್ರತಿವಾದ ಪತ್ರಗಳ ತಿದ್ದುಪಡಿಗೆ ಅನುಮತಿ ನೀಡತಕ್ಕದ್ದು.

(2) ಯಾರೇ ಪಾರ್ಸಿಯು, ಪಾರ್ಸಿ ವಿವಾಹ ಮತ್ತು ವಿವಾಹ ವಿಚ್ಛೇದನ ಅಧಿನಿಯಮ, 1865ರ ಮೇರೆಗೆ (1865ರ 15) ಅಥವಾ ಈ ಅಧಿನಿಯಮದ ಮೇರೆಗೆ ವಿವಾಹವಾಗಿದ್ದು ಅಂಥ ಪಾರ್ಸಿಯು ಅವನ ಅಥವಾ ಅವಳ ಧರ್ಮ ಅಥವಾ ವಾಸವನ್ನು ಅವನ ಅಥವಾ ಅವಳ ಹೆಂಡತಿ ಅಥವಾ ಗಂಡನು

ಬದುಕಿರುವವರೆಗೂ ಬದಲಾಯಿಸಬಹುದಾದರೂ ಸಹ, ಮತ್ತು ಅಂಥ ಪಾರ್ಸಿಯು ಅಂಥ ಹೆಂಡತಿ ಅಥವಾ ಗಂಡನಿಂದ ಕಾನೂನುಸಮ್ಮತವಾಗಿ ವಿವಾಹ ವಿಚ್ಛೇದನ ಮಾಡಿಕೊಳ್ಳದಿರುವವರೆಗೆ ಅಥವಾ ಅಂಥ ವಿವಾಹವು ಕಾನೂನುಸಮ್ಮತವಾಗಿ ಅನೂರ್ಜಿತವಾಗಿದೆಯೆಂದು ಘೋಷಣೆಯಾಗದಿರುವವರೆಗೆ ಅಥವಾ ಸದರಿ ಅಧಿನಿಯಮಗಳಲ್ಲಿ ಯಾವುದೇ ಅಧಿನಿಯಮದಿಂದ ಸಕ್ಷಮ ನ್ಯಾಯಾಲಯದ ಡಿಕ್ರಿಯ ಮೇರೆಗೆ ವಿಘಟಿತವಾಗದಿರುವವರೆಗೆ ಅವನು ಈ ಅಧಿನಿಯಮದ ಉಪಬಂಧಗಳಿಗೆ ಬದ್ಧನಾಗಿರತಕ್ಕದ್ದು.

**53. ನಿರಸನ.-** ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ, 1937 (1937ರ 20)ರ ಪ್ರಕರಣ 3 ಮತ್ತು ಅನುಸೂಚಿ - II ರಿಂದ ನಿರಸನಗೊಳಿಸಲಾಗಿದೆ.

## ಅನುಸೂಚಿ - I

(3ನೇ ಪ್ರಕರಣ ನೋಡಿ)

### ರಕ್ತ ಸಂಬಂಧ ಮತ್ತು ವಿವಾಹ ಸಂಬಂಧದ ನಿಷೇಧಿತ ತಲೆಮಾರುಗಳ ಕೋಷ್ಟಕ

ಒಬ್ಬನು ಅವನ,-

1. ತಂದೆಯ ಅಜ್ಜನ ತಾಯಿಯನ್ನು
2. ತಂದೆಯ ಅಜ್ಜಿಯ ತಾಯಿಯನ್ನು
3. ತಾಯಿಯ ತಾತನ ತಾಯಿಯನ್ನು
4. ತಾಯಿಯ ಅಜ್ಜಿಯ ತಾಯಿಯನ್ನು
5. ತಂದೆಯ ಅಜ್ಜಿಯನ್ನು
6. ತಂದೆಯ ತಾತನ ಹೆಂಡತಿಯನ್ನು
7. ತಾಯಿಯ ಅಜ್ಜಿಯನ್ನು
8. ತಾಯಿಯ ತಾತನ ಹೆಂಡತಿಯನ್ನು
9. ತಾಯಿ ಅಥವಾ ಮಲತಾಯಿಯನ್ನು
10. ತಂದೆಯ ಸೋದರಿ ಅಥವಾ ಮಲಸೋದರಿಯನ್ನು
11. ತಾಯಿಯ ಸೋದರಿ ಅಥವಾ ಮಲಸೋದರಿಯನ್ನು
12. ಸೋದರಿ ಅಥವಾ ಮಲಸೋದರಿಯನ್ನು
13. ಸೋದರನ ಮಗಳನ್ನು ಅಥವಾ ಮಲಸೋದರನ ಮಗಳನ್ನು ಅಥವಾ ಸೋದರನ ಅಥವಾ ಮಲಸೋದರನ ಯಾರೇ ನೇರ ಪಿತೃವಂಶಜನ ಮಗಳನ್ನು
14. ಸೋದರಿಯ ಮಗಳನ್ನು ಅಥವಾ ಮಲಸೋದರಿಯ ಮಗಳನ್ನು ಅಥವಾ ಸೋದರಿಯ ಅಥವಾ ಮಲಸೋದರಿಯ ಯಾರೇ ನೇರ ಪಿತೃ ವಂಶಜನ ಮಗಳನ್ನು
15. ಮಗಳನ್ನು ಅಥವಾ ಮಲಮಗಳನ್ನು ಅಥವಾ ಅವರಲ್ಲಿ ಯಾರಾದರೊಬ್ಬರ ನೇರ ಪಿತೃ ವಂಶಜನ ಮಗಳನ್ನು
16. ಮಗನ ಮಗಳನ್ನು ಅಥವಾ ಮಲಮಗನ ಮಗಳನ್ನು ಅಥವಾ ಮಗನ ಅಥವಾ ಮಲಮಗನ ಯಾರೇ ನೇರ ಪಿತೃ ವಂಶಜನ ಮಗಳನ್ನು
17. ಮಗನ ಅಥವಾ ಮಲಮಗನ ಹೆಂಡತಿಯನ್ನು ಅಥವಾ ಮಗನ ಅಥವಾ ಮಲಮಗನ ಯಾರೇ ನೇರ ಪಿತೃ ವಂಶಜಳನ್ನು
18. ಮಗಳ ಮಗನ ಅಥವಾ ಮಲಮಗಳ ಮಗನ ಹೆಂಡತಿಯನ್ನು ಅಥವಾ ಮಗಳ ಅಥವಾ ಮಲ ಮಗಳ ಯಾರೇ ನೇರ ಪಿತೃ ವಂಶಜಳನ್ನು
19. ಮಗಳ ಗಂಡನ ತಾಯಿಯನ್ನು
20. ಮಗನ ಹೆಂಡತಿಯ ತಾಯಿಯನ್ನು
21. ಹೆಂಡತಿಯ ತಂದೆಯ ತಾತನ ತಾಯಿಯನ್ನು
22. ಹೆಂಡತಿಯ ತಂದೆಯ ಅಜ್ಜಿಯ ತಾಯಿಯನ್ನು
23. ಹೆಂಡತಿಯ ತಾಯಿಯ ಅಜ್ಜನ ತಾಯಿಯನ್ನು

24. ಹೆಂಡತಿಯ ತಾಯಿಯ ಅಜ್ಜಿಯ ತಾಯಿಯನ್ನು
25. ಹೆಂಡತಿಯ ತಂದೆಯ ಅಜ್ಜಿಯನ್ನು
26. ಹೆಂಡತಿಯ ತಾಯಿಯ ಅಜ್ಜಿಯನ್ನು
27. ಹೆಂಡತಿಯ ತಾಯಿಯನ್ನು ಅಥವಾ ಮಲತಾಯಿಯನ್ನು
28. ಹೆಂಡತಿಯ ತಂದೆಯ ಸೋದರಿಯನ್ನು
29. ಹೆಂಡತಿಯ ತಾಯಿಯ ಸೋದರಿಯನ್ನು
30. ತಂದೆಯ ಸೋದರನ ಹೆಂಡತಿಯನ್ನು
31. ತಾಯಿಯ ಸೋದರನ ಹೆಂಡತಿಯನ್ನು
32. ಸೋದರನ ಮಗನ ಹೆಂಡತಿಯನ್ನು
33. ಸೋದರಿಯ ಮಗನ ಹೆಂಡತಿಯನ್ನು

 – ವಿವಾಹವಾಗತಕ್ಕದ್ದಲ್ಲ.

**ಒಬ್ಬ ಹೆಂಗಸು ಅವಳ,–**

1. ತಂದೆಯ ಅಜ್ಜನ ತಂದೆಯನ್ನು
2. ತಂದೆಯ ಅಜ್ಜಿಯ ತಂದೆಯನ್ನು
3. ತಾಯಿಯ ಅಜ್ಜನ ತಂದೆಯನ್ನು
4. ತಾಯಿಯ ಅಜ್ಜಿಯ ತಂದೆಯನ್ನು
5. ತಂದೆಯ ಅಜ್ಜನನ್ನು
6. ತಂದೆಯ ಅಜ್ಜಿಯ ಪತಿಯನ್ನು
7. ತಾಯಿಯ ಅಜ್ಜನನ್ನು
8. ತಾಯಿಯ ಅಜ್ಜಿಯ ಪತಿಯನ್ನು
9. ತಂದೆಯನ್ನು ಅಥವಾ ಮಲತಂದೆಯನ್ನು
10. ತಂದೆಯ ಸೋದರನನ್ನು ಅಥವಾ ಮಲಸೋದರನನ್ನು
11. ತಾಯಿಯ ಸೋದರನನ್ನು ಅಥವಾ ಮಲಸೋದರನನ್ನು
12. ಸೋದರನನ್ನು ಅಥವಾ ಮಲಸೋದರನನ್ನು
13. ಸೋದರನ ಮಗನನ್ನು ಅಥವಾ ಮಲಸೋದರನ ಮಗನನ್ನು, ಅಥವಾ ಸೋದರನ ಅಥವಾ ಮಲಸೋದರನ ಯಾರೇ ನೇರ ಪಿತೃ ವಂಶಜ
14. ಸೋದರಿಯ ಮಗನನ್ನು ಅಥವಾ ಮಲಸೋದರಿಯ ಮಗನನ್ನು ಅಥವಾ ಸೋದರಿ ಅಥವಾ ಮಲಸೋದರಿಯ ಯಾರೇ ನೇರ ಪಿತೃ ವಂಶಜ
15. ಮಗನನ್ನು ಅಥವಾ ಮಲಮಗನನ್ನು ಅಥವಾ ಅವರಲ್ಲಿ ಯಾರಾದರೊಬ್ಬರ ನೇರ ಪಿತೃ ವಂಶಜ
16. ಮಗಳ ಮಗನನ್ನು ಅಥವಾ ಮಲಮಗಳ ಮಗನನ್ನು, ಅಥವಾ ಮಗಳ ಅಥವಾ ಮಲಮಗಳ ಯಾರೇ ನೇರ ಪಿತೃವಂಶಜ

17. ಮಗಳ ಅಥವಾ ಮಲಮಗಳ ಪತಿಯನ್ನು, ಅಥವಾ ಮಗಳ ಅಥವಾ ಮಲಮಗಳ ಯಾರೇ ನೇರ ಪಿತೃವಂಶಜ
18. ಮಗಳ ಮಗನ ಅಥವಾ ಮಲಮಗನ ಮಗಳ ಪತಿಯನ್ನು, ಅಥವಾ ಮಗನ ಅಥವಾ ಮಲಮಗನ ಯಾರೇ ನೇರ ಪಿತೃವಂಶಜ
19. ಮಗಳ ಗಂಡನ ತಂದೆಯನ್ನು
20. ಮಗನ ಹೆಂಡತಿಯ ತಂದೆಯನ್ನು
21. ಗಂಡನ ತಂದೆಯ ಅಜ್ಜನ ತಂದೆಯನ್ನು
22. ಗಂಡನ ತಂದೆಯ ಅಜ್ಜಿಯ ತಂದೆಯನ್ನು
23. ಗಂಡನ ತಾಯಿಯ ಅಜ್ಜನ ತಂದೆಯನ್ನು
24. ಗಂಡನ ತಾಯಿಯ ಅಜ್ಜಿಯ ತಂದೆಯನ್ನು
25. ಗಂಡನ ತಂದೆಯ ಅಜ್ಜನನ್ನು
26. ಗಂಡನ ತಾಯಿಯ ಅಜ್ಜನನ್ನು
27. ಗಂಡನ ತಂದೆಯನ್ನು ಅಥವಾ ಮಲ ತಂದೆಯನ್ನು
28. ಗಂಡನ ತಂದೆಯ ಸೋದರನನ್ನು
29. ಗಂಡನ ತಾಯಿಯ ಸೋದರನನ್ನು
30. ಗಂಡನ ಸೋದರನ ಮಗನನ್ನು, ಅಥವಾ ಅವನ ನೇರ ಪಿತೃ ವಂಶಜ
31. ಗಂಡನ ಸೋದರಿಯ ಮಗನನ್ನು, ಅಥವಾ ಅವನ ನೇರ ಪಿತೃ ವಂಶಜ
32. ಸೋದರನ ಮಗಳ ಗಂಡನನ್ನು
33. ಸೋದರಿಯ ಮಗಳ ಗಂಡನನ್ನು

– ವಿವಾಹವಾಗತಕ್ಕದ್ದಲ್ಲ.

**ಸೂಚನೆ.–** ಮೇಲಿನ ಕೋಷ್ಟಕದಲ್ಲಿನ "ಸೋದರ" ಮತ್ತು "ಸೋದರಿ" ಎಂಬ ಪದಗಳು ಸಂಪೂರ್ಣ ರಕ್ತ ಸಂಬಂಧಿ ಸೋದರ ಮತ್ತು ಸೋದರಿ ಎಂಬುದನ್ನು ಸೂಚಿಸುತ್ತದೆ. ಮಲಸಂಬಂಧ ಎಂದರೆ ವಿವಾಹದಿಂದಾದ ಸಂಬಂಧ ಎಂಬುದನ್ನು ಸೂಚಿಸುತ್ತದೆ.

**ಅನುಸೂಚಿ - II**

(6ನೇ ಪ್ರಕರಣ ನೋಡಿ)

**ವಿವಾಹ ಪ್ರಮಾಣ ಪತ್ರ**

| | |
|---|---|
| | ವಿವಾಹ ನಡೆದ ದಿನಾಂಕ ಮತ್ತು ಸ್ಥಳ |
| | ಪತಿ ಮತ್ತು ಪತ್ನಿಯ ಹೆಸರು |
| | ವಿವಾಹ ಕಾಲದಲ್ಲಿನ ಷರತ್ತುಗಳು |
| | ದರ್ಜೆ ಅಥವಾ ವೃತ್ತಿ |
| | ವಯಸ್ಸು |
| | ವಾಸಸ್ಥಳ |
| | ತಂದೆ ಅಥವಾ ಪೋಷಕರ ಹೆಸರು |
| | ದರ್ಜೆ ಅಥವಾ ವೃತ್ತಿ |
| | ವಿವಾಹ ನಿರ್ವಹಿಸುವ ಪುರೋಹಿತರ ಸಹಿ |
| | ವಿವಾಹ ಮಾಡಿಕೊಳ್ಳುವ ಪಕ್ಷಕಾರರ ಸಹಿ |
| | ವಿವಾಹವಾಗುವವರು 21 ವರ್ಷದೊಳಗಿದ್ದರೆ ಅವರ ತಂದೆ ಅಥವಾ ಪೋಷಕರ ಸಹಿ |
| | ಸಾಕ್ಷಿಗಳ ರುಜು. |

* * *